# ಶಾಂತಿಯ ಮಾರ್ಗ

ಸಯ್ಯದ್ ಅಬುಲ್ ಆಲಾ ಮೌದೂದಿ

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

# ಪ್ರಕಾಶಕರ ಮಾತು

'ಶಾಂತಿಯ ಮಾರ್ಗ' ಎಂಬ ನಮ್ಮ ಪ್ರಾರಂಭಿಕ ಪ್ರಕಟಣೆಗಳಲ್ಲಿ ಒಂದಾದ ಈ ಕಿರು ಹೊತ್ತಗೆಯನ್ನು 26ನೆಯ ಸಲ ವಾಚಕರ ಮುಂದಿಡುತ್ತಿದ್ದೇವೆ. ಇದು ಜಗದ್ವಿಖ್ಯಾತ ದಾರ್ಶನಿಕ ಮತ್ತು ಸುಧಾರಕರಾದ ಮರ್ಹೂಮ್ ಮೌ। ಸಯ್ಯದ್ ಅಬುಲ್ ಆಲಾ ಮೌದೂದಿಯವರು ಸ್ವಾತಂತ್ರ್ಯಪೂರ್ವ ಕಪುರ್ತಲಾ ರಾಜ್ಯದಲ್ಲಿ ವಿವಿಧ ಧರ್ಮೀಯ ಶ್ರೋತೃಗಳ ಮುಂದೆ ಮಾಡಿದ ಉಪನ್ಯಾಸದ ಕನ್ನಡಾನುವಾದ. ಉರ್ದು ಭಾಷೆಯಲ್ಲಿ ಇದು 'ಸಲಾಮತಿ ಕಾ ರಾಸ್ತಾ' ಎಂಬ ಹೆಸರಲ್ಲಿ ಪ್ರಕಟಗೊಂಡಿದ್ದು ಜಗತ್ತಿನ ಹಲವಾರು ಭಾಷೆಗಳಲ್ಲಿ ಅದು ತರ್ಜುಮೆಗೊಂಡು ಪ್ರಕಟಗೊಂಡಿದೆ.

ಮಾನವ ಜೀವನದಿಂದ ಶಾಂತಿ ತೊಲಗಿ ಹೋಗಲು ಕಾರಣ ವೇನು? ನಮ್ಮ ಮೇಲೆ ಸದಾ ಕಷ್ಟ ಪರಂಪರೆಗಳು ಏಕೆ ಎರಗು ತ್ತವೆ? ನಮ್ಮ ಜೀವನ ಯಂತ್ರವೇಕೆ ಕೆಟ್ಟು ಹೋಗಿದೆಯೆಂಬುದು ಇಂದು ಜಗತ್ತಿನ ಹೆಚ್ಚಿನ ಜನರಿಗೆ ಬಿಡಿಸಲಾಗದ ಕಗ್ಗಂಟಾಗಿ ಪರಿಣಮಿಸಿದೆ. ಇಂತಹ ಅತ್ಯಂತ ಜಟಿಲ ಸಮಸ್ಯೆಗಳಿಗೆ ಈ ಕೃತಿಯಲ್ಲಿ ವಸ್ತುನಿಷ್ಠವಾಗಿ ಪರಿಹಾರವನ್ನು ಸೂಚಿಸಲಾಗಿದೆ.

ಪುಸ್ತಕದ ಹೆಸರೇ ಸೂಚಿಸುವಂತೆ ನಿಷ್ಪಕ್ಷಮತಿಗಳಾದ ಸತ್ಯಾನ್ವೇಷಿ ಗಳಿಗೆ ಇದು ಒಂದು ಪಠಣಾರ್ಹವಾದ ಕೃತಿಯಾಗಿದೆ. ಇದು ವಾಚಕರನ್ನು 'ಶಾಂತಿಯ ಮಾರ್ಗ'ದೆಡೆಗೆ ಒಯ್ಯುವ ಮಾಧ್ಯಮ ವಾಗಲಿ ಎಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

# ಅನುಕ್ರಮಣಿಕೆ


- ಶಾಂತಿಯ ಮಾರ್ಗ 5
- ದೇವನ ಅಸ್ತಿತ್ವ 5
- ಏಕದೇವವಾದ 9
- ವಿನಾಶಕ್ಕೆ ಮೂಲ ಕಾರಣ 16
- ಆಕ್ರಮಣಕ್ಕೆ ಕಾರಣ 22
- ಅನ್ಯಾಯಕ್ಕೆ ಕಾರಣವೇನು? 23
- ಶಾಂತಿ ಸ್ಥಾಪನೆ ಹೇಗೆ? 27
- ಒಂದು ಸಂದೇಹ 29

# ಶಾಂತಿಯ ಮಾರ್ಗ

## ದೇವನ ಅಸ್ತಿತ್ವ

ಪೇಟೆಯಲ್ಲಿ ಅಂಗಡಿಯೊಂದಿದೆ. ಅದಕ್ಕೆ ಮಾಲಕನಿಲ್ಲ. ಸಾಮಾನು ತರುವವರಿಲ್ಲ. ಅದನ್ನು ರಕ್ಷಿಸುವವರಿಲ್ಲ. ಅಂಗಡಿ ತನ್ನಿಂತಾನೇ ನಡೆಯುತ್ತದೆ. ಅದರಲ್ಲಿ ಸಾಮಾನು ತನ್ನಷ್ಟಕ್ಕೆ ಬಂದು ಸೇರುತ್ತಾ ತನ್ನಷ್ಟಕ್ಕೆ ಗ್ರಾಹಕರ ಕೈ ಸೇರುತ್ತಾ ಇರುತ್ತದೆಂದು ಯಾರಾದರೂ ನಿಮ್ಮೊಡನೆ ಹೇಳಿದರೆ ನೀವು ನಂಬುವಿರಾ? ಯಾವ ಅಂಗಡಿಯಲ್ಲಾದರೂ ಸಾಮಾನನ್ನು ಯಾರೂ ತಾರದೆ ತಾನಾಗಿ ಬರುತ್ತದೆ, ತನ್ನಿಂತಾನೇ ಕಳ್ಳತನ, ಲೂಟಿ, ದರೋಡೆಗಳಿಂದ ರಕ್ಷಿಸಲ್ಪಡುತ್ತದೆಂಬುದನ್ನು ನೀವು ನಂಬುವಿರಾ? ನಿಮ್ಮ ಅಂತರಂಗದೊಡನೆ ಕೇಳಿರಿ–ಜಗತ್ತಿನಲ್ಲೆಲ್ಲಾದರೂ ಇಂತಹ ಅಂಗಡಿಯೊಂದಿರಬಹುದೆಂಬ ಮಾತು ಸ್ವಲ್ಪವಾದರೂ ಬುದ್ಧಿ ಸ್ತಿಮಿತದಲ್ಲಿರುವಾತನಿಗೆ ಅರ್ಥವಾಗಬಹುದೇ?

ಇನ್ನೂ ಯೋಚಿಸಿರಿ. "ಈ ಪಟ್ಟಣದಲ್ಲೊಂದು ಕಾರ್ಖಾನೆಯಿದೆ. ಅದಕ್ಕೆ ಇಂಜಿನಿಯರ್ ಇಲ್ಲ. ಅದಕ್ಕೆ ಮಾಲಿಕನಿಲ್ಲ. ಮೇಸ್ತ್ರಿಯಿಲ್ಲ. ಇಡೀ ಕಾರ್ಖಾನೆ ತನ್ನಷ್ಟಕ್ಕೆ ಉಂಟಾಗಿದೆ. ಎಲ್ಲ ಯಂತ್ರಗಳೂ ತಾವಾಗಿಯೇ ನಿರ್ಮಾಣಗೊಂಡಿವೆ. ಎಲ್ಲ ಬಿಡಿ ಭಾಗಗಳೂ ತಾವಾಗಿಯೇ ತಂತಮ್ಮ ಸ್ಥಾನಗಳಲ್ಲಿ ಬಂದು ಕೂಡಿಕೊಂಡಿವೆ. ಎಲ್ಲ ಯಂತ್ರಗಳೂ ತಾವಾಗಿಯೇ ಚಲಿಸುತ್ತಿವೆ ಮತ್ತು ಅದರಿಂದ ಅತ್ಯದ್ಭುತ ವಸ್ತುಗಳು ತಾವಾಗಿಯೇ ತಯಾರಾಗಿ ಹೊರ ಬರುತ್ತಲೂ ಇವೆ" ಎಂದು ಯಾರಾದರೂ ಹೇಳಿದರೆ

ನೀವು ಆಶ್ಚರ್ಯಗೊಂಡು ಅವನ ಮುಖವನ್ನೇ ನೋಡದಿರುವಿರಾ? ಅವನ ತಲೆ ಕೆಟ್ಟು ಹೋಗಿರಬೇಕೆಂಬ ಸಂದೇಹ ನಿಮಗುಂಟಾಗದೇ? ಒಬ್ಬ ಹುಚ್ಚನಲ್ಲದೆ ಇನ್ನಾರಾದರೂ ಇಂತಹ ಅರ್ಥಹೀನ ಮಾತುಗಳನ್ನಾಡಬಹುದೇ?

ದೂರದ ದೃಷ್ಟಾಂತಗಳನ್ನು ಬಿಡೋಣ. ನಿಮ್ಮ ಕಣ್ಣ ಮುಂದೆಯೇ ಉರಿಯುತ್ತಿರುವ ಈ ವಿದ್ಯುದ್ದೀಪದಲ್ಲಿ ಬೆಳಕು ತನ್ನಷ್ಟಕ್ಕೆ ಉಂಟಾಯಿತೆಂದು ಯಾರಾದರೂ ಹೇಳಿದರೆ ಅದನ್ನು ನೀವು ಒಪ್ಪುವಿರಾ? ನಿಮ್ಮ ಮುಂದಿರುವ ಈ ಕುರ್ಚಿಯು ತನ್ನಿಂತಾನೇ ಉಂಟಾಯಿತೆಂದು ಮಹಾ ತತ್ವಜ್ಞಾನಿಯೇ ಹೇಳಿದರೂ ನೀವು ನಂಬುವಿರಾ? ನೀವು ಉಟ್ಟಿರುವ ಬಟ್ಟೆಗಳನ್ನು ಯಾರೂ ನೇಯದೆ, ತಮ್ಮಷ್ಟಕ್ಕೆ ಉಂಟಾದುವು ಎಂದು ಜಗದ್ವಿಖ್ಯಾತ ಪಂಡಿತನೊಬ್ಬನು ಹೇಳಿದರೂ ನೀವು ಸಮ್ಮತಿಸುವಿರಾ? ನಿಮ್ಮ ಮುಂದೆ ನಿಂತಿರುವ ಈ ಕಟ್ಟಡಗಳನ್ನು ಯಾರೂ ನಿರ್ಮಿಸದೆ, ಅವು ಸ್ವತಃ ಮೇಲೇರಿ ಬಂದಿವೆ ಎಂದು ಜಗತ್ತಿನ ಎಲ್ಲ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಒಟ್ಟಾಗಿ ನಿಮಗೆ ನಂಬಿಕೆ ಹುಟ್ಟಿಸಲು ಪ್ರಯತ್ನಿಸಿದರೂ ಅವರು ಹೇಳಿದ್ದಾರೆಂದ ಮಾತ್ರಕ್ಕೆ ಇಂತಹ ಅರ್ಥಹೀನ ಮಾತುಗಳ ಮೇಲೆ ನಿಮಗೆ ನಂಬಿಕೆ ಬರಬಹುದೇ?

ನೀವು ಹಗಲಿರುಳು ನೋಡುತ್ತಿರುವ ವಸ್ತುಗಳ ಕೆಲವು ಉದಾಹರಣೆ ಮಾತ್ರ ನಿಮ್ಮ ಮುಂದಿಟ್ಟಿದ್ದೇನೆ. ಅವುಗಳ ಆಧಾರದಲ್ಲಿ ಯೋಚಿಸಿ ನೋಡಿ. ಒಂದು ಸಾಮಾನ್ಯ ಅಂಗಡಿಯು ಅದರ ಮಾಲಿಕನಿಲ್ಲದೆ ನಡೆಯಲಾರದೆಂದೂ ಒಂದು ಚಿಕ್ಕ ಕಾರ್ಖಾನೆಯು ಅದರ ನಿರ್ಮಾಪಕನ ಹೊರತು ಸ್ಥಾಪಿಸಲ್ಪಡಲಾರದು ಮತ್ತು ನಡೆಸುವವನಿಲ್ಲದೆ ನಡೆಯಲಾರದೆಂದೂ ನಿಮ್ಮ ಅಂತಃಕರಣ ನುಡಿಯುವಾಗ ಈ ಭೂಮಿ-ಆಕಾಶಗಳ ಅಗಾಧ ಕಾರ್ಖಾನೆ, ಗಡಿಯಾರದ ಬಿಡಿಭಾಗಗಳಂತೆ ಚಲಿಸುತ್ತಿರುವ ಸೂರ್ಯ, ಚಂದ್ರ, ನಕ್ಷತ್ರಾದಿಗಳು; ಮಹಾ ಸಾಗರಗಳಿಂದ ಏಳುತ್ತಿರುವ ನೀರಾವಿ, ಆವಿಯಿಂದ ಮೋಡವಾಗುವುದು, ಮೋಡಗಳನ್ನು ಗಾಳಿಯು ಎತ್ತಿಕೊಂಡು ಭೂಮಿಯ ಮೂಲೆಮೂಲೆಗಳಿಗೆ ಒಯ್ಯುವುದು, ಆ ಬಳಿಕ ಸೂಕ್ತ ಸಮಯದಲ್ಲಿ ಅವು ತಣಿದು ಆವಿಯು ಪುನಃ ನೀರಾಗಿ ಪರಿವರ್ತನೆ ಗೊಳ್ಳುವುದು, ಆ ನೀರು ಮಳೆಯ ಹನಿಗಳ ರೂಪದಲ್ಲಿ ನೆಲಕ್ಕೆ ಸುರಿಯುವುದು, ಅದರಿಂದಾಗಿ

ಒಣಗಿ ಸತ್ತಂತಿದ್ದ ನೆಲದಿಂದ ಹಚ್ಚಹಸಿರಾದ ಸಸ್ಯಗಳು ಹೊರಬರುವುದು, ಅವುಗಳಿಂದ ನಾನಾ ತರದ ಧಾನ್ಯಗಳು, ಬಣ್ಣಬಣ್ಣದ ಹೂ-ಹಣ್ಣುಗಳ ಸೃಷ್ಟಿಯಾಗುವುದು ಇವೆಲ್ಲವೂ ಓರ್ವ ಕರ್ತನಿಲ್ಲದೆ ತಾನಾಗಿಯೇ ಉಂಟಾದುವೆಂದೂ ನಡೆಸುವಾತನಿಲ್ಲದೆ ತನ್ನಷ್ಟಕ್ಕೆ ನಡೆಯುತ್ತಲಿವೆಯೆಂದೂ ನೀವು ಒಪ್ಪಿಕೊಳ್ಳುವುದಾದರೂ ಹೇಗೆ?

ಒಂದು ಕುರ್ಚಿ, ಒಂದು ಗಜ ಬಟ್ಟೆ, ಒಂದು ಸಣ್ಣ ಗೋಡೆಯ ಬಗೆಗೂ ಅವು ತಾವಾಗಿಯೇ ಉಂಟಾದುವು ಎಂದು ಯಾರಾದರೂ ಹೇಳಿದರೆ ಅವರ ಮೆದುಳು ಹಾಳಾಗಿದೆಯೆಂದೇ ನೀವು ನಿರ್ಧರಿಸಿ ಬಿಡುವಿರಿ. ಹಾಗಾದರೆ ಈ ಭೂಮಿ ತನ್ನಿಂತಾನೇ ಉಂಟಾಯಿತು, ಸಮಸ್ತ ಪ್ರಾಣಿ ವರ್ಗಗಳು ತಮ್ಮಷ್ಟಕ್ಕೇ ಹುಟ್ಟಿ ಬಂದುವು, ಮನುಷ್ಯನಂತಹ ಅದ್ಭುತ ಜೀವಿಯೂ ತಾನಾಗಿಯೇ ಉಂಟಾಗಿ ಬಿಟ್ಟಿತೆಂದು ಹೇಳುವವರ ಮೆದುಳು ಕೆಟ್ಟಿದೆಯೆನ್ನುವುದರಲ್ಲಿ ಸಂದೇಹವೇನಿದೆ?

ಮಾನವ ಶರೀರವು ನಿರ್ಮಾಣಗೊಂಡಿರುವ ಅಂಶಗಳನ್ನು ವಿಜ್ಞಾನಿಗಳು ಬೇರ್ಪಡಿಸಿದಾಗ ಅದರಲ್ಲಿ ಅಲ್ಪಸ್ವಲ್ಪ ಕಬ್ಬಿಣ, ಇದ್ದಲು, ಗಂಧಕ, ರಂಜಕ, ಸುಣ್ಣ, ಕೆಲವು ಜಾತಿಯ ಲವಣಗಳು, ಇನ್ನು ಕೆಲವು ವಿಧದ ಅನಿಲಗಳು ಇವೇ ಮೊದಲಾದ ಇತರ ವಸ್ತುಗಳು ಮಾತ್ರ ಇರುವುದೆಂದು ತಿಳಿದುಬಂತು. ಅವುಗಳ ಒಟ್ಟು ಬೆಲೆ ಕೇವಲ ಕೆಲವು ರೂಪಾಯಿಗಳಾಗಬಹುದು. ಈ ವಸ್ತುಗಳನ್ನು ಮಾನವ ದೇಹದಲ್ಲಿರುವಷ್ಟೇ ಪ್ರಮಾಣದಲ್ಲಿ ತೆಗೆದುಕೊಳ್ಳಿರಿ. ಅವುಗಳನ್ನು ಇಷ್ಟಬಂದಂತೆ ಮಿಶ್ರಮಾಡಿ ನೋಡಿರಿ. ಏನು ಮಾಡಿದರೂ ಯಾವ ವಿಧದಿಂದಲೂ ಮನುಷ್ಯನ ನಿರ್ಮಾಣವಾಗುವುದಿಲ್ಲ.

ಹಾಗಿರುವಾಗ ಇಂತಹ ನಿರ್ಜೀವ ವಸ್ತುಗಳಿಂದ ನೋಡುವ, ಕೇಳುವ, ಮಾತಾಡುವ, ನಡೆಯುವ, ಓಡಾಡುವ ಮಾತ್ರವಲ್ಲ ವಿಮಾನ, ರೇಡಿಯೋಗಳನ್ನು ತಯಾರಿಸುವಂತಹ ಮನುಷ್ಯನು ಒಬ್ಬ ಮಹಾ ಚತುರ ಶಿಲ್ಪಿಯ ಕೌಶಲ್ಯದಿಂದಲ್ಲದೆ ತನ್ನಿಂತಾನೇ ಉಂಟಾಗಲು ಸಾಧ್ಯವಿದೆಯೇ?

ತಾಯಿಯ ಗರ್ಭವೆಂಬ ಚಿಕ್ಕ ಕಾರ್ಖಾನೆಯಲ್ಲಿ ಮನುಷ್ಯನು ಹೇಗೆ

ತಯಾರಾಗುತ್ತಾನೆಂಬುದನ್ನು. ಯೋಚಿಸಿದ್ದೀರಾ? ತಂದೆಯ ಕಾರಸ್ಥಾನಕ್ಕೆ ಇಲ್ಲಿ ಹಸ್ತಕ್ಷೇಪವಿಲ್ಲ. ತಾಯಿಯ ಯುಕ್ತಿಗೆ ಇಲ್ಲಿ ಪ್ರವೇಶವಿಲ್ಲ. ಸೂಕ್ಷ್ಮ ದರ್ಶಕವಿಲ್ಲದೆ ನೋಡಲಿಕ್ಕೂ ಸಾಧ್ಯವಿಲ್ಲದ ಎರಡು ಕ್ರಿಮಿಗಳು ಒಂದು ಚಿಕ್ಕ ಚೀಲದೊಳಗೆ ಯಾವಾಗ ಸೇರಿಕೊಳ್ಳುತ್ತವೆಂದು ತಿಳಿಯದು. ಅದಕ್ಕೆ ತಾಯಿಯ ರಕ್ತದಿಂದಲೇ ಮೇಲೆ ಹೇಳಿದ ಕಬ್ಬಿಣ, ಗಂಧಕ, ರಂಜಕ ಮೊದಲಾದ ಎಲ್ಲ ವಸ್ತುಗಳೂ ಒಂದು ನಿರ್ದಿಷ್ಟ ತೂಕ ಮತ್ತು ಪ್ರಮಾಣದೊಂದಿಗೆ ಒದಗಿ ಮಾಂಸ ಪಿಂಡವಾಗುತ್ತದೆ. ಅನಂತರ ಅದಕ್ಕೆ ಕಣ್ಣಿರಬೇಕಾದಲ್ಲಿ ಕಣ್ಣು, ಕಿವಿ ಇರಬೇಕಾದಲ್ಲಿ ಕಿವಿ, ಮಿದುಳಿರಬೇಕಾದಲ್ಲಿ ಮಿದುಳು, ಹೃದಯವಿರಬೇಕಾದಲ್ಲಿ ಹೃದಯ, ಎಲುಬಿನ ಸ್ಥಾನದಲ್ಲಿ ಎಲುಬು, ಮಾಂಸದ ಸ್ಥಾನದಲ್ಲಿ ಮಾಂಸ ಹೀಗೆ ಪ್ರತಿಯೊಂದು ಭಾಗವೂ ತನ್ನ ಸ್ಥಾನದಲ್ಲೇ ಅಚ್ಚುಕಟ್ಟಾಗಿ ಜೋಡಿಸಲ್ಪಡುತ್ತದೆ. ಅನಂತರ ಅದಕ್ಕೆ ಜೀವವುಂಟಾಗಿ ನೋಡುವ, ರುಚಿಸುವ, ಮೂಸುವ, ಮಾತಾಡುವ, ಆಲೋಚಿಸುವ ಶಕ್ತಿ ಮತ್ತು ಇನ್ನೂ ಅಗಣಿತ ಶಕ್ತಿಗಳು ಅದರಲ್ಲಿ ತುಂಬುತ್ತವೆ. ಹೀಗೆ ಮನುಷ್ಯನ ರಚನೆಯು ಪರಿಪೂರ್ಣಗೊಂಡಾಗ, ಒಂಭತ್ತು ತಿಂಗಳ ತನಕ ನಿರ್ಮಾಣವಾಗುತ್ತಲಿದ್ದ ಅದೇ ಚಿಕ್ಕ ಕಾರ್ಖಾನೆಯು ಸ್ವತಃ ಒತ್ತಡ ಹಾಕಿ ಅದನ್ನು ದೂಡಿ ಹೊರಗೆ ಹಾಕುತ್ತದೆ.

ಈ ಕಿರು ಕಾರ್ಖಾನೆಗಳಲ್ಲಿ ಒಂದೇ ರೀತಿಯಲ್ಲಿ ಲಕ್ಷಾವಧಿ ಮಾನವರು ತಯಾರಾಗಿ ಹೊರಬರುತ್ತಲಿದ್ದರೂ ಪ್ರತಿಯೊಬ್ಬನ ಮಾದರಿ ಬೇರೆ, ರೂಪ ಬೇರೆ, ಬಣ್ಣ ಬೇರೆ, ಸ್ವರ ಬೇರೆ, ಶಕ್ತಿ ಸಾಮರ್ಥ್ಯಗಳು ಬೇರೆ, ಒಲವುಗಳೂ ವಿಚಾರಗಳೂ ಬೇರೆ, ನೀತಿ ನಡವಳಿಕೆಗಳೂ ಬೇರೆ. ಹೆಚ್ಚೇಕೆ, ಒಂದೇ ತಾಯಿಯ ಹೊಟ್ಟೆಯಿಂದ ಹೊರಬಂದ ಇಬ್ಬರು ಸಹೋದರರೂ ಒಬ್ಬರನ್ನೊಬ್ಬರು ಹೋಲುವುದಿಲ್ಲವೆಂಬುದನ್ನು ಕಂಡಾಗ ಜಗತ್ತು ವಿಸ್ಮಯಗೊಳ್ಳುತ್ತದೆ. ಈ ಅದ್ಭುತವನ್ನು ಕಂಡಾಗ ದಂಗುಬಡಿದಂತಾ ಗುತ್ತದೆ. ಇದನ್ನು ಕಂಡ ಬಳಿಕವೂ ಈ ಕಾರ್ಯವು ಒಬ್ಬ ಮಹಾ ಪ್ರವೀಣ, ಮಹಾ ಶಕ್ತಿಶಾಲಿ, ಮಹಾ ಮೇಧಾವಿ, ಅನಂತ ಸಾಮರ್ಥ್ಯಗಳನ್ನು ಹೊಂದಿರುವಂತಹ ದೇವನ ಹೊರತು ಆಗುತ್ತದೆಂದೂ ಅಥವಾ ಆಗಲು

ಸಾಧ್ಯವಿದೆಯೆಂದೂ ಹೇಳುವವನ ಮಿದುಳು ನಿಜಕ್ಕೂ ಕೆಟ್ಟಿದೆ. ಅಂತಹವನನ್ನು ಬುದ್ಧಿವಂತನೆನ್ನುವುದೆಂದರೆ ಬುದ್ಧಿಶಕ್ತಿಯನ್ನು ಅವಮಾನಿಸಿದಂತೆಯೇ ಸರಿ. ನಾನಂತೂ ಇಂತಹವನನ್ನು ಯಾವುದಾದರೊಂದು ಗಹನವಾದ ವಿಷಯದಲ್ಲಿ ವಿಚಾರ ವಿನಿಮಯಕ್ಕೂ ಅರ್ಹನೆಂದು ಭಾವಿಸುವುದಿಲ್ಲ.

## ಏಕದೇವವಾದ

ಇನ್ನೂ ಮುಂದೆ ಸಾಗೋಣ. ಈ ಲೋಕದಲ್ಲಿ ನಡೆಯುವ ಯಾವ ಕೆಲಸವೇ ಆದರೂ– ಅದು ಚಿಕ್ಕದಿರಲಿ, ದೊಡ್ಡದಿರಲಿ– ಅದರ ಹೊಣೆಯನ್ನು ಒಬ್ಬನೇ ವಹಿಸದಿದ್ದರೆ ಅದು ಸುವ್ಯವಸ್ಥಿತವಾಗಿಯೂ ನಿಯಮಬದ್ಧವಾಗಿಯೂ ಸರ್ವಥಾ ಆಗಲಾರದೆಂಬುದನ್ನು ನಿಮ್ಮಲ್ಲಿ ಪ್ರತಿಯೊಬ್ಬನ ಮನಸ್ಸು ಸಾಕ್ಷ್ಯ ಹೇಳುವುದು. ಒಂದು ಶಾಲೆಗೆ ಇಬ್ಬರು ಮುಖ್ಯೋಪಾಧ್ಯಾಯರು, ಒಂದು ಸಂಸ್ಥೆಗೆ ಇಬ್ಬರು ನಿರ್ದೇಶಕರು, ಒಂದು ಸೈನ್ಯಕ್ಕೆ ಇಬ್ಬರು ಸೇನಾಪತಿಗಳು, ಒಂದು ಸಾಮ್ರಾಜ್ಯಕ್ಕೆ ಇಬ್ಬರು ಅರಸರು, ಒಂದು ರಾಷ್ಟ್ರಕ್ಕೆ ಇಬ್ಬರು ರಾಷ್ಟ್ರಾಧ್ಯಕ್ಷರಿರುವುದನ್ನು ನೀವೆಂದಾದರೂ ಕೇಳಿದ್ದೀರಾ? ಹೀಗೆಲ್ಲಾ ಇದ್ದರೆ, ಒಂದು ದಿನಕ್ಕಾದರೂ ಅಲ್ಲಿಯ ವ್ಯವಸ್ಥೆ ಸರಿಯಾಗಿರಬಹುದೇ?

ಒಂದು ಕೆಲಸವನ್ನು ಒಬ್ಬನಿಗಿಂತ ಹೆಚ್ಚು ಮಂದಿಯ ಹೊಣೆಗಾರಿಕೆಗೆ ಬಿಟ್ಟಾಗ ಅಲ್ಲಿ ಸಂಪೂರ್ಣ ಅವ್ಯವಸ್ಥೆಯುಂಟಾಗುವುದನ್ನು ಮತ್ತು ಜಗಳಗಳುಂಟಾಗುವುದನ್ನು ನಿಮ್ಮ ಜೀವನದ ಚಿಕ್ಕಪುಟ್ಟ ವ್ಯವಹಾರಗಳಲ್ಲೂ ಅನುಭವಿಸುತ್ತಿರುವಿರಿ. ಸುವ್ಯವಸ್ಥೆ, ಕ್ರಮಬದ್ಧತೆ, ಶಿಷ್ಟಾಚಾರ, ಪ್ರಶಾಂತತೆಗಳಿರುವಲ್ಲೆಲ್ಲ ಒಂದೇ ಶಕ್ತಿಯ ಸ್ವಾಮ್ಯವಿರುತ್ತದೆ. ಒಂದೇ ಅಸ್ತಿತ್ವ ಅಧಿಕಾರದಲ್ಲಿರುತ್ತದೆ ಮತ್ತು ಒಬ್ಬನೇ ಸೂತ್ರಧಾರಿಯಾಗಿರುತ್ತಾನೆ. ಇದರ ಹೊರತು ಸುವ್ಯವಸ್ಥೆಯ ಕಲ್ಪನೆಯನ್ನೂ ಮಾಡಲಾಗದು.

ಇದು ಒಂದಿಷ್ಟು ಬುದ್ಧಿಶಕ್ತಿಯುಳ್ಳವನೂ ಒಪ್ಪಿಕೊಳ್ಳುವಂತಹ ಸರಳವಾದ ವಿಷಯ. ಇದನ್ನು ಮುಂದಿಟ್ಟುಕೊಂಡು ನಿಮ್ಮ ಸುತ್ತಮುತ್ತಲಿರುವ ಜಗತ್ತಿನ ಮೇಲೊಮ್ಮೆ ದೃಷ್ಟಿ ಹಾಯಿಸಿರಿ. ನಿಮ್ಮ ಮುಂದಿರುವ ಈ ಅಗಾಧ ವಿಶ್ವ ಬಾಹ್ಯಾಕಾಶದಲ್ಲಿ ಸುತ್ತುತ್ತಿರುವಂತೆ ನಿಮಗೆ ತೋರುತ್ತಿರುವ ಕೋಟ್ಯಂತರ

ಗ್ರಹ ನಕ್ಷತ್ರಾದಿಗಳು, ನೀವು ವಾಸಿಸುತ್ತಿರುವ ಈ ಭೂಮಿ, ರಾತ್ರೆ ಬೆಳಗುತ್ತಿರುವ ಈ ಚಂದ್ರ, ದಿನಂಪ್ರತಿ ಉದಯಿಸುತ್ತಿರುವ ಈ ಸೂರ್ಯ, ಚೆಂಡುಗಳಂತೆ ತಿರುಗುತ್ತಿರುವ ಬುಧ, ಗುರು, ಶುಕ್ರ, ಶನಿಯೇ ಮೊದಲಾದ ಗ್ರಹಗಳು, ಅವುಗಳ ಪರಿಭ್ರಮಣದಲ್ಲಿ ಎಷ್ಟೊಂದು ಸುವ್ಯವಸ್ಥೆ ಇದೆಯೆಂಬುದನ್ನು ಗಮನಿಸಿರಿ. ರಾತ್ರೆಯು ತನ್ನ ನಿಶ್ಚಿತ ಸಮಯಕ್ಕಿಂತ ಮುಂಚೆ ಬಂದುದನ್ನು ನೀವೆಂದಾದರೂ ಕಂಡಿದ್ದೀರಾ? ಹಗಲು ತನ್ನ ನಿಯಮಿತ ಸಮಯಕ್ಕಿಂತ ಮೊದಲು ಬಂದುದಿದೆಯೇ? ಚಂದ್ರನೆಂದಾದರೂ ಬಂದು ಭೂಮಿಗೆ ಅಪ್ಪಳಿಸಿದ್ದಿದೆಯೇ? ಸೂರ್ಯನು ತನ್ನ ಪಥವನ್ನು ಬಿಟ್ಟು ಚಲಿಸಿದ್ದುಂಟೇ? ಯಾವುದಾದರೊಂದು ನಕ್ಷತ್ರವು ತನ್ನ ಕಕ್ಷೆಯಿಂದ ಸರಿದು ಹೋಯಿತೆಂದು ಕೇಳಿದ್ದೀರಾ?

ನಿಮ್ಮ ಭೂಮಿಗಿಂತ ಲಕ್ಷಾಂತರ ಪಟ್ಟು ದೊಡ್ಡದಾಗಿಯೂ ಇನ್ನು ಕೆಲವು ಸೂರ್ಯನಿಗಿಂತ ಸಾವಿರಾರು ಪಟ್ಟು ದೊಡ್ಡದಾಗಿಯೂ ಇರುವಂತಹ ಕೋಟಿಗಟ್ಟಲೆ ನಕ್ಷತ್ರಗಳೆಲ್ಲ ಗಡಿಯಾರದ ಯಂತ್ರಭಾಗಗಳಂತೆ ಒಂದು ಪ್ರಬಲ ಕಾನೂನಿನಲ್ಲಿ ಬಿಗಿಯಲ್ಪಟ್ಟು ನಿಶ್ಚಿತ ಗಣನೆಗನುಸಾರವಾಗಿ ನಿಯಮಿತ ವೇಗದೊಂದಿಗೆ, ನಿಶ್ಚಯಿಸಲ್ಪಟ್ಟ ಪಥದಲ್ಲಿ ಚಲಿಸುತ್ತಿವೆ. ಅವುಗಳ ವೇಗದಲ್ಲಿ ವ್ಯತ್ಯಾಸವಾಗುವುದಿಲ್ಲ. ಅವು ತಂತಮ್ಮ ಪಥದಿಂದ ಲೇಶಮಾತ್ರವೂ ಸರಿಯುವುದಿಲ್ಲ. ಅವುಗಳ ನಡುವೆ ಇರಿಸಲಾಗಿರುವ ಸಂಬಂಧದಲ್ಲಿ ಕಿಂಚಿತ್ತಾದರೂ ವ್ಯತ್ಯಾಸ ಬಂದುಹೋದರೆ, ಇಡೀ ವ್ಯವಸ್ಥೆಯೇ ಅಸ್ತವ್ಯಸ್ತವಾಗುವುದು. ರೈಲುಗಳು ಢಿಕ್ಕಿ ಹೊಡೆದಂತೆಯೇ ಆಕಾಶಕಾಯಗಳೂ ಪರಸ್ಪರ ಢಿಕ್ಕಿ ಹೊಡೆಯಬಹುದು.

ಇದು ಬಾನಲೋಕದ ಮಾತಾಯಿತು. ನಮ್ಮ ಭೂಮಿಯ ಮೇಲೂ ನಮ್ಮ ಸ್ವಂತದ ಕಡೆಗೂ ದೃಷ್ಟಿ ಹಾಯಿಸಿರಿ. ಈ ಮಣ್ಣಿನ ಗೋಲದ ಮೇಲೆ ನೀವು ನೋಡುತ್ತಿರುವ ಜೀವನದ ಆಟವೆಲ್ಲ ಕೆಲವು ವ್ಯವಸ್ಥಿತ ನಿಯಮಗಳ ನಿಮಿತ್ತ ನೆಲೆನಿಂತಿದೆ. ಭೂಮಿಯ ಗುರುತ್ವಾಕರ್ಷಣಾ ಶಕ್ತಿಯು ಸಮಸ್ತ ವಸ್ತುಗಳನ್ನು ತನ್ನ ಸುತ್ತಲೂ ಬಿಗಿದುಕೊಂಡಿದೆ. ಅದು ಒಂದರೆಕ್ಷಣವಾದರೂ

ತನ್ನ ಹಿಡಿತವನ್ನು ಸಡಿಲಿಸಿಬಿಟ್ಟರೆ ಇಡೀ ಭೂಕರ್ಮ ಶಾಲೆಯು ಚೆಲ್ಲಾಪಿಲ್ಲಿಯಾಗಿ ಚದುರಿ ಹೋಗುವುದು. ಈ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಬಿಡಿಭಾಗಗಳೆಲ್ಲವೂ ಒಂದು ನಿರ್ದಿಷ್ಟ ನಿಯಮಕ್ಕೆ ಬದ್ಧವಾಗಿವೆ. ಈ ನಿಯಮದಲ್ಲಿ ಎಂದೆಂದಿಗೂ ವ್ಯತ್ಯಾಸ ಬರುವುದಿಲ್ಲ. ಗಾಳಿಯು ತನ್ನ ನಿಯಮವನ್ನನುಸರಿಸುತ್ತದೆ. ನೀರು ತನ್ನ ನಿಯಮಕ್ಕೆ ಬದ್ಧವಾಗಿದೆ. ಬೆಳಕಿಗಿರುವ ನಿಯಮವನ್ನು ಅದು ಪಾಲಿಸುತ್ತದೆ. ಶೀತೋಷ್ಣಗಳಿಗೆ ನಿಶ್ಚಯಿಸಲಾಗಿರುವ ನಿಯಮಕ್ಕೆ ಅವು ಅಧೀನವಾಗಿವೆ. ಕಲ್ಲು, ಮಣ್ಣು, ಲೋಹಗಳು, ವಿದ್ಯುತ್, ಹಬೆ, ಸಸ್ಯವರ್ಗ, ಪ್ರಾಣಿವರ್ಗ– ಇವುಗಳ ಪೈಕಿ ಯಾವುದೂ ತನ್ನ ಮೇರೆಯನ್ನು ಮೀರುವ, ತನ್ನ ಗುಣವನ್ನು ಬದಲಾಯಿಸಿಕೊಳ್ಳುವ ಅಥವಾ ತನ್ನ ಪಾಲಿಗೆ ಬಂದಿರುವ ಕರ್ತವ್ಯವನ್ನು ಮಾಡದಿರುವ ಸ್ವಾತಂತ್ರ್ಯ ಮತ್ತು ಸಾಮರ್ಥ್ಯ ಹೊಂದಿಲ್ಲ. ಅದಲ್ಲದೆ ಈ ಕಾರ್ಖಾನೆಯ ಎಲ್ಲ ಬಿಡಿ ಭಾಗಗಳೂ ತಂತಮ್ಮ ಮೇರೆಗಳೊಳಗೆ ತಮಗೆ ನಿಶ್ಚಯಿಸಲ್ಪಟ್ಟ ನಿಯಮಗಳನ್ನು ಪಾಲಿಸುತ್ತಾ ಒಂದನ್ನೊಂದು ಹೊಂದಿಕೊಂಡು ಕಾರ್ಯವೆಸಗುತ್ತವೆ. ಇವೆಲ್ಲವೂ ಪರಸ್ಪರ ಪೂರಕವಾಗಿ ವರ್ತಿಸುವುದರಿಂದಲೇ ಈ ಜಗತ್ತು ಸುಸೂತ್ರವಾಗಿ ನಡೆಯುತ್ತಿದೆ.

ಒಂದು ಸಣ್ಣ ಬೀಜದ ಉದಾಹರಣೆಯನ್ನು ತೆಗೆದುಕೊಳ್ಳಿರಿ. ಭೂಮಿ ಮತ್ತು ಆಕಾಶಗಳ ಎಲ್ಲ ಶಕ್ತಿಗಳೂ ಒಟ್ಟಾಗಿ ಅದರ ಪೋಷಣೆಗೆ ಸಹಕರಿಸದಿದ್ದರೆ ಅದು ಮೊಳೆತು, ಬೆಳೆದು ಮರವಾಗಲು ಸಾಧ್ಯವೇ ಇಲ್ಲ. ಭೂಮಿಯು ತನ್ನ ಭಂಡಾರದಿಂದ ಅದಕ್ಕೆ ಆಹಾರ ನೀಡುತ್ತದೆ. ಸೂರ್ಯನು ಅದಕ್ಕೆ ಸಾಕಷ್ಟು ಉಷ್ಣವನ್ನು ನೀಡುತ್ತದೆ. ನೀರಿನಿಂದ ಬೇಡಿದಷ್ಟನ್ನು ನೀರು ನೀಡುತ್ತದೆ. ವಾಯುವಿನಿಂದ ಕೇಳಿದಷ್ಟನ್ನು ವಾಯು ಕೊಡುತ್ತದೆ. ಇರುಳು ಅದಕ್ಕೆ ತಂಪನ್ನೂ ಇಬ್ಬನಿಯನ್ನೂ ಒದಗಿಸುತ್ತದೆ. ಹಗಲು ಅದಕ್ಕೆ ಉಷ್ಣವನ್ನೊದಗಿಸಿ ಬಲಿಯುವಂತೆ ಮಾಡುತ್ತದೆ. ಹೀಗೆ ಇವೆಲ್ಲ ತಿಂಗಳುಗಟ್ಟಲೆ, ವರ್ಷಗಟ್ಟಲೆ ನಿರಂತರವಾಗಿ ಮತ್ತು ಸುವ್ಯವಸ್ಥಿತವಾಗಿ ಒಟ್ಟಾಗಿ ಅದನ್ನು ಸಾಕುತ್ತಾ ಸಲಹುತ್ತಾ ಇದ್ದುದರ ಪರಿಣಾಮವಾಗಿ ಅದು ಮರವಾಗುತ್ತದೆ ಮತ್ತು ಅದರಲ್ಲಿ ಫಲಗಳು ಹಿಡಿಯುತ್ತವೆ. ನಿಮ್ಮ

ಜೀವನಾಧಾರಕ್ಕಾಗಿ ನೀವು ಬೆಳೆಸುತ್ತಿರುವ ಎಲ್ಲ ಬೆಳೆಗಳು ಈ ಎಲ್ಲ ವಿಧದ ಶಕ್ತಿಗಳು ಒಟ್ಟಾಗಿ ಕೆಲಸ ಮಾಡುತ್ತಿರುವುದರಿಂದಲೇ ಸಿದ್ಧವಾಗುವುವು. ಮಾತ್ರವಲ್ಲ ಭೂಮಿ–ಆಕಾಶಗಳ ಸಕಲ ಶಕ್ತಿಗಳೂ ಒಟ್ಟಾಗಿ ನಿಮ್ಮ ಪೋಷಣೆಯಲ್ಲಿ ತೊಡಗಿರುತ್ತವೆ.

ಈ ಸಂಯುಕ್ತ ಕಾರ್ಯದಲ್ಲಿ ಅವುಗಳ ಪೈಕಿ ಕೇವಲ ಗಾಳಿಯು ದೂರ ಸರಿದುಬಿಟ್ಟರೂ ನೀವು ಬದುಕಲಾರಿರಿ. ವಾಯು ಮತ್ತು ಉಷ್ಣತೆಯೊಂದಿಗೆ ನೀರು ನೆರವಾಗುವುದನ್ನು ನಿರಾಕರಿಸಿದರೆ, ಮಳೆಯ ಒಂದು ಹನಿಯೂ ನಿಮ್ಮ ಮೇಲೆ ಬೀಳಲಾರದು. ನೀರಿನೊಂದಿಗೆ ಮಣ್ಣು ಸಹಕರಿಸುವುದನ್ನು ಬಿಟ್ಟರೆ, ನಿಮ್ಮ ತೋಟಗಳೆಲ್ಲ ಒಣಗಿ ಹೋಗುವುವು, ನಿಮ್ಮ ಹೊಲಗಳಲ್ಲಿ ಎಂದಿಗೂ ಬೆಳೆ ಬೆಳೆಯಲಾರದು. ನಿಮ್ಮ ಕಟ್ಟಡಗಳು ನಿರ್ಮಾಣಗೊಳ್ಳಲಾರವು. ಬೆಂಕಿಕಡ್ಡಿಯ ಘರ್ಷಣೆಯಿಂದ ಬೆಂಕಿ ಯುಂಟಾಗಲು ಒಪ್ಪದಿದ್ದರೆ ನಿಮ್ಮ ಒಲೆಗಳೆಲ್ಲ ತಣ್ಣಗಾಗುವುವು ಮತ್ತು ನಿಮ್ಮ ಕಾರ್ಖಾನೆಗಳು ಒಮ್ಮೆಲೆ ನಿಂತುಹೋಗುವುವು. ಕಬ್ಬಿಣವು ಬೆಂಕಿಯೊಂದಿಗೆ ಸಂಬಂಧ ಕಡಿದುಕೊಂಡರೆ ನಿಮ್ಮ ಉಗಿಬಂಡಿಗಳು, ಮೋಟಾರು ವಾಹನಾದಿ ಗಳಂತಿರಲಿ, ಒಂದು ಚೂರಿಯನ್ನೂ ನೀವು ತಯಾರಿಸಲಾರಿರಿ.

ಅಂತೂ ಈ ಅಗಾಧವಾದ ಸಾಮ್ರಾಜ್ಯದ ಎಲ್ಲ ಇಲಾಖೆಗಳೂ ಕಟ್ಟುನಿಟ್ಟಾಗಿ ಪರಸ್ಪರ ಕೂಡಿಕೊಂಡು ಕಾರ್ಯವೆಸಗುತ್ತಿರುವುದರಿಂದಲೂ ಯಾವುದೇ ಇಲಾಖೆಯ ಕಾರ್ಯಕರ್ತರಿಗೆ ತಮ್ಮ ಕರ್ತವ್ಯದಿಂದ ಹಿಂಜರಿಯುವ ಅಥವಾ ನಿಶ್ಚಿತ ನಿಯಮ ಪ್ರಕಾರ ಇತರ ಇಲಾಖೆಗಳ ಕಾರ್ಯಕರ್ತರೊಂದಿಗೆ ಸಹಕಾರ ನೀಡುವುದನ್ನು ನಿರಾಕರಿಸುವ ಸಾಮರ್ಥ್ಯವಿಲ್ಲದೆ ಹೋದುದರಿಂದಲೂ ನೀವಿರುವ ಈ ಜಗತ್ತು ನೆಲೆನಿಂತಿದೆ.

ನಾನೀಗ ವಿವರಿಸಿದುದರಲ್ಲೇನಾದರೂ ಸುಳ್ಳಿದೆಯೇ? ಅಥವಾ ವಸ್ತುಸ್ಥಿತಿಗೆ ವಿರುದ್ಧವಾದ ವಿಷಯವಿದೆಯೇ? ಇದರಲ್ಲಿ ಸುಳ್ಳಿಲ್ಲ– ಇವೆಲ್ಲ ಸತ್ಯವೆಂದೇ ನೀವು ಒಪ್ಪುವಿರಿ. ಹಾಗಾದರೆ, ಈ ಅದ್ಭುತ ವ್ಯವಸ್ಥೆ, ಈ ಆಶ್ಚರ್ಯಕರ ಕ್ರಮಬದ್ಧತೆ, ಈ ಪರಿಪೂರ್ಣ ಮಟ್ಟದ ಹೊಂದಾಣಿಕೆ, ಭೂಮಿ–ಆಕಾಶ

ಗಳಲ್ಲಿರುವ ಅಸಂಖ್ಯಾತ ವಸ್ತುಗಳ ಹಾಗೂ ಶಕ್ತಿಗಳ ಮಧ್ಯೆ ಸಾಮ್ಯತೆ-ಸಾದೃಶ್ಯಗಳಿರಲು ಕಾರಣವೇನು? ಎಷ್ಟೋ ಕೋಟಿ ವರ್ಷಗಳಿಂದ ಈ ವಿಶ್ವವು ಹೀಗೆಯೇ ನಡೆದು ಬಂದಿದೆ. ಲಕ್ಷಾಂತರ ವರ್ಷಗಳಿಂದ ಈ ಭೂಮಿಯ ಮೇಲೆ ಸಸ್ಯಗಳು ಬೆಳೆಯುತ್ತಲೂ ಪ್ರಾಣಿಗಳು ಹುಟ್ಟುತ್ತಲೂ ಇವೆ. ಇದರ ಮೇಲೆ ಮಾನವನು ಎಷ್ಟು ಕಾಲದಿಂದ ವಾಸಿಸುತ್ತ ಬಂದಿರುವನೆಂದು ಗೊತ್ತಿಲ್ಲ. ಈ ಅವಧಿಯಲ್ಲಿ ಎಂದೂ ಚಂದ್ರನು ಭೂಮಿಯ ಮೇಲೆ ಬೀಳಲಿಲ್ಲ. ಭೂಮಿಯು ಸೂರ್ಯನಿಗೆ ಢಿಕ್ಕಿ ಹೊಡೆಯಲಿಲ್ಲ. ನೀರು ಮಣ್ಣಿನೊಡನೆ ಕೋಪಗೊಳ್ಳಲಿಲ್ಲ. ಉಷ್ಣತೆಯು ಬೆಂಕಿಯೊಂದಿಗಿರುವ ಸಂಬಂಧವನ್ನು ಕಡಿದುಕೊಳ್ಳಲಿಲ್ಲ. ಈ ಮಹಾ ಸಾಮ್ರಾಜ್ಯದ ಎಲ್ಲ ರಾಜ್ಯಗಳೂ ಎಲ್ಲ ಇಲಾಖೆಗಳೂ ಎಲ್ಲ ಕಾರ್ಯಕರ್ತರೂ ಇಷ್ಟೊಂದು ಕಾನೂನು ಬದ್ಧವಾಗಿಯೂ ಶಿಸ್ತುಬದ್ಧವಾಗಿಯೂ ನಡೆಯುತ್ತಿರುವುದೇಕೆ? ಅವರೊಳಗೆ ಕಲಹವೇಕಾಗುವುದಿಲ್ಲ? ಘರ್ಷಣೆಗಳೇಕೆ ನಡೆಯುವುದಿಲ್ಲ? ಇವೆಲ್ಲ ಒಂದೇ ವ್ಯವಸ್ಥೆಗೆ ಬದ್ಧವಾಗಿರುವುದು ಯಾವುದರಿಂದ?

ಇದರ ಉತ್ತರವನ್ನು ನಿಮ್ಮ ಅಂತರಂಗದೊಡನೆ ಕೇಳಿರಿ. ಒಬ್ಬನೇ ದೇವನು ಇಡೀ ವಿಶ್ವದ ಸಾರ್ವಭೌಮ ನಾಗಿದ್ದಾನೆಂದೂ ಅವನೋರ್ವನ ಪ್ರಬಲ ಶಕ್ತಿಯೇ ಎಲ್ಲರನ್ನೂ ನಿಯಂತ್ರಿಸುತ್ತಾನೆಂದೂ ನಿಮ್ಮ ಅಂತಃಕರಣವೇ ಸಾಕ್ಷ್ಯ ನುಡಿಯುವುದಿಲ್ಲವೇ? ಹತ್ತಿಪ್ಪತ್ತಲ್ಲ, ಇಬ್ಬರು ದೇವರು ಈ ವಿಶ್ವದ ಒಡೆಯರಾಗಿರುತ್ತಿದ್ದರೂ ಇದರ ವ್ಯವಸ್ಥೆಯು ಇಷ್ಟೊಂದು ಕ್ರಮಬದ್ಧವಾಗಿ ಎಂದಿಗೂ ನಡೆಯಲಾರದು. ಒಂದು ಸಣ್ಣ ಶಾಲೆಯ ಆಡಳಿತವು ಇಬ್ಬರು ಮುಖ್ಯೋಪಾಧ್ಯಾಯರ ಅಧಿಕಾರವನ್ನು ಸಹಿಸದಿರುವಾಗ ಇಷ್ಟು ಅಗಾಧವಾದ ಭೂಮಿ-ಆಕಾಶಗಳ ಸಾಮ್ರಾಜ್ಯದ ಆಡಳಿತವು ಇಬ್ಬರು ದೇವರಿಂದ ನಡೆಯುವುದಾದರೂ ಹೇಗೆ?

ವಾಸ್ತವದಲ್ಲಿ ಈ ಜಗತ್ತು ನಿರ್ಮಾಪಕನಿಲ್ಲದೆ ತಾನಾಗಿ ನಿರ್ಮಾಣ ಹೊಂದಿಲ್ಲವೆಂದಷ್ಟೇ ಅಲ್ಲ, ಅದನ್ನು ಒಬ್ಬನೇ ಉಂಟುಮಾಡಿದನೆಂಬುದೂ ದಿಟ. ಈ ಜಗತ್ತಿನ ವ್ಯವಸ್ಥೆಯು ಆಳುವವನಿಲ್ಲದೆ ನಡೆಯುವುದಿಲ್ಲವೆಂಬುದು

ಸತ್ಯ. ಮಾತ್ರವಲ್ಲ ಆ ಆಳುವವನು ಒಬ್ಬನೇ ಆಗಿರುತ್ತಾನೆಂಬುದೂ ಸತ್ಯ. ಇಲ್ಲಿ ಒಬ್ಬನ ಹೊರತು ಇನ್ನಾರ ಆಜ್ಞೆಯೂ ನಡೆಯುವುದಿಲ್ಲವೆಂದೂ ವಿಧಿ ನಿಯಮಗಳ ಕಟ್ಟುನಿಟ್ಟಾದ ಪಾಲನೆಯೇ ಸಾರಿ ಹೇಳುತ್ತದೆ.

ಭೂಮಿಯಿಂದ ಆಕಾಶದ ವರೆಗೂ ಏಕಸಾಮ್ರಾಟನ ಅಧಿಕಾರವೇ ನಡೆಯುತ್ತಿದೆ. ಸೂರ್ಯ, ಚಂದ್ರ, ನಕ್ಷತ್ರಾದಿಗಳೂ ಅವನ ಅಧಿಕಾರದ ಅಧೀನದಲ್ಲಿಯೇ ಇವೆ. ಭೂಮಿಯು ತನ್ನಲ್ಲಿರುವ ಸಕಲ ವಸ್ತುಗಳ ಸಹಿತ ಅವನಿಗೆ ಮಾತ್ರ ಅಧೀನವಾಗಿದೆ. ಗಾಳಿ, ನೀರು, ನದಿಗಳು, ಪರ್ವತಗಳು ಅವನ ಆಜ್ಞಾನುವರ್ತಿಗಳಾಗಿವೆ. ಸಸ್ಯಗಳೂ ಪ್ರಾಣಿಗಳೂ ಅವನ ಆಜ್ಞೆಗೆ ಬದ್ಧವಾಗಿವೆ. ಮಾನವನ ಜೀವನ, ಮರಣಗಳು ಅವನ ಅಂಕೆಯಲ್ಲಿವೆ. ಈ ಬಲವಾದ ನಿಯಂತ್ರಣವೇ ಎಲ್ಲವನ್ನೂ ಬಿಗಿಹಿಡಿದಿದೆ. ಅವನ ಅಧಿಕಾರದೊಳಗೆ ತನ್ನ ಅಧಿಕಾರವನ್ನು ಚಲಾಯಿಸುವ ಸಾಮರ್ಥ್ಯ ಯಾರಿಗೂ ಇಲ್ಲ. ಸರ್ವ ಸಂಪೂರ್ಣವಾದ ಈ ಸಂಘಟನೆಯಲ್ಲಿ ಒಬ್ಬನಿಗಿಂತ ಹೆಚ್ಚು ಅಧಿಕಾರಗಳಿಗೆ ಅವಕಾಶವೇ ಇಲ್ಲ. ಅವನ ಆಜ್ಞೆಯಲ್ಲಿ ಲವಲೇಶವೂ ಇತರರ ಪಾಲಿಲ್ಲವೆಂದು ಈ ಸಂಘಟನೆಯ ಸ್ವರೂಪವೇ ಬಯಸುತ್ತದೆ.

ಅವನೊಬ್ಬನೇ ಸರ್ವಾಧಿಕಾರಿ. ಅವನ ಹೊರತಾಗಿರುವುದೆಲ್ಲವೂ ಅಧೀನ. ಏಕೆಂದರೆ, ಸಾರ್ವಭೌಮತೆಯ ಕಿಂಚಿತ್ ಅಧಿಕಾರವೂ ಇನ್ನೊಬ್ಬನಿಗೆ ಹಸ್ತಾಂತರಗೊಳ್ಳುವುದರ ಪರಿಣಾಮವೇ ಅಶಿಸ್ತು ಮತ್ತು ಅವ್ಯವಸ್ಥೆ. ಅಪ್ಪಣೆಗಳನ್ನು ನೀಡಲು ಅಧಿಕಾರ ಮಾತ್ರ ಸಾಲದು, ಜ್ಞಾನವೂ ಬೇಕು. ಇಡೀ ವಿಶ್ವವನ್ನು ಏಕಕಾಲದಲ್ಲಿ ನೋಡಿಕೊಳ್ಳಬಲ್ಲ ಹಾಗೂ ಅದರ ಔಚಿತ್ಯಗಳನ್ನು ಗಮನಿಸಿ ಆದೇಶಗಳನ್ನು ಜಾರಿಗೊಳಿಸಲು ಬೇಕಾದ ಸರ್ವವೀಕ್ಷಣೆಯ ಅಗತ್ಯವಿದೆ.

ಜಗದೊಡೆಯನ ಹೊರತು ಜಗದ್ವೀಕ್ಷಣಾ ಸಾಮರ್ಥ್ಯವಿಲ್ಲದ ಇನ್ನೂ ಕೆಲವು ಚಿಕ್ಕಚಿಕ್ಕ ದೇವರುಗಳೂ ಇದ್ದು ಅವರಿಗೆ ಜಗತ್ತಿನ ಕೆಲವು ಭಾಗಗಳಲ್ಲಿ ಕೆಲವು ವಿಷಯಗಳ ಬಗ್ಗೆ ತಮ್ಮ ಆಜ್ಞೆ ಕೊಡುವ ಅಧಿಕಾರವಿರುತ್ತಿದ್ದರೆ ಈ ಭೂಮಿ ಮತ್ತು ಆಕಾಶಗಳ ಸಕಲ ಕಾರ್ಯಾಗಾರಗಳು ಅಸ್ತವ್ಯಸ್ತವಾಗಿ

ಹೋಗುತ್ತಿದ್ದವು. ಒಂದು ಸಾಮಾನ್ಯ ಯಂತ್ರವನ್ನು ಅದರ ಸರಿಯಾದ ಯಂತ್ರಜ್ಞಾನವಿಲ್ಲದವನ ವಶಕ್ಕೆ ಕೊಟ್ಟು ನಡೆಸಲು ಬಿಟ್ಟರೆ ಅವನು ಅದನ್ನು ಕೆಡಿಸಿ ಬಿಡುವನೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಹಾಗೆಯೇ ಭೂಮಿ–ಆಕಾಶಗಳೆಂಬ ಈ ಸಾಮ್ರಾಜ್ಯದ ಅಪ್ರತಿಮ ಕ್ರಮಬದ್ಧತೆಯಲ್ಲಿ, ಇದರ ಸಾರ್ವಭೌಮತೆಯ ಅಧಿಕಾರದಲ್ಲಿ ಏಕದೇವನ ಹೊರತು ಬೇರೆ ಯಾರ ಅಧಿಕಾರವೂ ಲೇಶ ಮಾತ್ರವೂ ಇಲ್ಲವೆಂದು ಮನುಷ್ಯನ ಸಹಜ ಬುದ್ಧಿಯು ತೀರ್ಪು ಕೊಡುತ್ತದೆ.

ಇದು ಸಂಭವ ಮಾತ್ರವಲ್ಲ, ದೇವನ ಈ ಸೃಷ್ಟಿಯಲ್ಲಿ ಸ್ವತಃ ದೇವನ ಹೊರತು ಇನ್ನಾರ ಆಜ್ಞೆಯೂ ನಡೆಯಲು ಕಾರಣಗಳಾಗಲಿ ಅವಕಾಶಗಳಾಗಲಿ ಇಲ್ಲದಿರುವುದು ಪರಮಾರ್ಥ. ದೇವನ ಅಪಾರ ಮಹಿಮಾ ಹಸ್ತಗಳಿಂದ ನಿರ್ಮಿಸಲ್ಪಟ್ಟಿರುವ, ಅವನ ಸೃಷ್ಟಿಯಾಗಿರುವ, ಅವನ ಅನುಗ್ರಹದಿಂದಲೇ ಅಸ್ತಿತ್ವದಲ್ಲಿರುವ, ಅವನಿಂದ ನಿರಪೇಕ್ಷರಾಗಿ ಸ್ವತಃ ಕ್ಷಣಕಾಲವೂ ಉಳಿಯಲು ಸಾಧ್ಯವಿಲ್ಲದಂತಹವರಿಗೆ ದೇವತ್ವದಲ್ಲಿ ಭಾಗೀದಾರರಾಗುವಂತಹ ಅರ್ಹತೆ ಯುಂಟಾಗುವುದು ಹೇಗೆ? ಒಬ್ಬ ನೌಕರನು ಒಡೆಯನ ಸೊತ್ತಿನಲ್ಲಿ ಭಾಗೀದಾರನಾಗಿರುವುದನ್ನು ಯಾರಾದರೂ ಕಂಡದ್ದಿದೆಯೇ? ಒಬ್ಬ ಮಾಲಿಕನು ತನ್ನ ಗುಲಾಮನನ್ನು ತನ್ನ ಸಹಭಾಗಿಯನ್ನಾಗಿ ಮಾಡಿಕೊಳ್ಳುವ ವಿಷಯ ನಿಮ್ಮ ಬುದ್ಧಿಗೆ ಎಟಕುತ್ತದೆಯೇ? ನಿಮ್ಮಲ್ಲಿ ಯಾರಾದರೂ ತಮ್ಮ ಸೇವಕರನ್ನು ತಮ್ಮ ಆಸ್ತಿಪಾಸ್ತಿಗಳಲ್ಲಾಗಲಿ, ಅಧಿಕಾರದಲ್ಲಾಗಲಿ, ಪಾಲುದಾರ ರನ್ನಾಗಿ ಮಾಡಿಕೊಳ್ಳುತ್ತಾರೆಯೇ?

ಈ ಕುರಿತು ನೀವು ವಿವೇಚಿಸಿದಾಗ ದೇವನ ಈ ಸಾಮ್ರಾಜ್ಯದಲ್ಲಿ ಯಾವ ದಾಸನಿಗೂ ಸ್ವಾಯತ್ತತೆ ಮತ್ತು ಸಾರ್ವಭೌಮತೆಯ ಹಕ್ಕು ಇಲ್ಲವೆಂದು ನಿಮ್ಮ ಅಂತಃಕರಣವೇ ಸಾಕ್ಷಿ ಹೇಳುತ್ತದೆ. ಹೀಗಾಗುವುದು ಅಸಂಭವ. ಸಹಜ ಬುದ್ಧಿ ಮತ್ತು ಪ್ರಕೃತಿ ಸ್ವಭಾವಕ್ಕೆ ಇದು ವಿರೋಧ, ಮಾತ್ರವಲ್ಲ ಸತ್ಯಕ್ಕೂ ವಿರೋಧವಾಗಿರುತ್ತದೆ.

## ವಿನಾಶಕ್ಕೆ ಮೂಲ ಕಾರಣ

ಈ ಜಗತ್ತಿನ ಸಂಪೂರ್ಣ ವ್ಯವಸ್ಥೆಯು ಮೇಲೆ ವಿವರಿಸಿದ ಮೂಲಭೂತ ತಥ್ಯಗಳ ಮೇಲೆ ನಡೆಯುತ್ತಿದೆ. ನೀವು ಈ ಜಗತ್ತಿನಿಂದ ಹೊರತಾಗಿರದೆ ಅದರ ಒಂದಂಗವೆಂಬ ನೆಲೆಯಲ್ಲಿರುತ್ತೀರಿ. ಆದುದರಿಂದ ಇಡೀ ಜಗತ್ತಿಗೆ ಈ ತಥ್ಯಗಳು ಮೂಲಾಧಾರವಾಗಿರುವಂತೆಯೇ ನಿಮ್ಮ ಮಟ್ಟಿಗೂ ಆಗಿರುತ್ತವೆ.

ಇಂದು ಮಾನವ ಜೀವನದಲ್ಲಿ ಶಾಂತಿ ಇಲ್ಲವಾಗಲು ಕಾರಣವೇನು? ನಮ್ಮ ಮೇಲೆ ಸದಾ ಕಷ್ಟ ಪರಂಪರೆಗಳು ಏಕೆ ಎರಗುತ್ತವೆ? ನಮ್ಮ ಜೀವನ ಯಂತ್ರವೇಕೆ ಕೆಟ್ಟು ಹೋಗಿದೆಯೆಂಬುದು ನಮ್ಮ ಪೈಕಿ ಪ್ರತಿಯೊಬ್ಬನಿಗೂ ಬಿಡಿಸಲಾಗದ ಕಗ್ಗಂಟಾಗಿ ಪರಿಣಮಿಸಿದೆ. ಜನಾಂಗಗಳೊಳಗೆ ಪರಸ್ಪರ ಘರ್ಷಣೆ ನಡೆಯುತ್ತಿದೆ. ರಾಷ್ಟ್ರಗಳೊಳಗೆ ಜಗ್ಗಾಟ ನಡೆಯುತ್ತಿದೆ. ಒಬ್ಬನು ಇನ್ನೊಬ್ಬನ ಮಟ್ಟಿಗೆ ತೋಳದಂತಾಗಿದ್ದಾನೆ. ಲಕ್ಷಾಂತರ ಜನರು ಯುದ್ಧಗಳಲ್ಲಿ ಕೊಲ್ಲಲ್ಪಡುತ್ತಾರೆ. ಕೋಟಿಗಟ್ಟಲೆ ಜನರ ವ್ಯಾಪಾರ ವ್ಯವಹಾರಾದಿಗಳು ಕೆಟ್ಟು ಹೋಗುತ್ತವೆ. ಅನೇಕ ಗ್ರಾಮಗಳು ನಾಶವಾಗುತ್ತಿವೆ. ಬಲಶಾಲಿಗಳು ದುರ್ಬಲರನ್ನು ನುಂಗುತ್ತಿದ್ದಾರೆ. ಧನಿಕರು ಬಡವರನ್ನು ಕೊಳ್ಳೆಹೊಡೆಯುತ್ತಿದ್ದಾರೆ. ಆಡಳಿತದಲ್ಲಿ ಅಕ್ರಮ, ನ್ಯಾಯಾಲಯಗಳಲ್ಲಿ ಅನ್ಯಾಯ, ಸಂಪತ್ತಿನ ಮೇಲೆ ದುರ್ಮೋಹ, ಅಧಿಕಾರದಲ್ಲಿ ಅಸತ್ಯ – ಒಟ್ಟಿನಲ್ಲಿ ಜನರೊಳಗೆ ಪರಸ್ಪರ ನಂಬಿಕೆ ಕೆಟ್ಟು ಹೋಗಿದೆ. ಧರ್ಮದ ಸೋಗಿನಲ್ಲಿ ಅಧರ್ಮವು ಮೆರೆಯುತ್ತಿದೆ. ಮಾನವ ಸಂತತಿಯು ಅಸಂಖ್ಯಾತ ಪಂಗಡಗಳಲ್ಲಿ ಹರಿಹಂಚಿ ಹೋಗಿದೆ. ಪ್ರತಿಯೊಂದು ಪಂಗಡವೂ ಇನ್ನೊಂದು ಪಂಗಡ ದೊಂದಿಗೆ ಮೋಸ, ಅಕ್ರಮ, ವಿಶ್ವಾಸಘಾತುಕತೆಗಳೊಂದಿಗೆ ಸಾಧ್ಯವಿದ್ದ ರೀತಿಯಲ್ಲೆಲ್ಲ ನಷ್ಟವನ್ನುಂಟು ಮಾಡುವುದನ್ನೇ ಪುಣ್ಯಕಾರ್ಯವೆಂದು ಭಾವಿಸಿದೆ. ಈ ಕೆಡುಕುಗಳಿಗೆ ಕಾರಣವೇನು? ನಿಸರ್ಗದಲ್ಲಿ ಎತ್ತ ನೋಡಿದರೂ ಶಾಂತಿಯೇ ನೆಲೆಸಿರುವುದು ಕಂಡುಬರುತ್ತದೆ. ನಕ್ಷತ್ರಗಳಲ್ಲಿ ಶಾಂತಿ ಇದೆ. ವಾಯುವಿನಲ್ಲಿ ಶಾಂತಿ ಇದೆ. ಎಲ್ಲ ಸೃಷ್ಟಿಗಳ ವ್ಯವಸ್ಥೆಯು ಶಾಂತಿಯೊಂದಿಗೆ ನಡೆಯುತ್ತಿದೆ. ಎಲ್ಲೂ ಅಶಾಂತಿ ಮತ್ತು ಕ್ಷೋಭೆ ಕಂಡುಬರುವುದಿಲ್ಲ. ಆದರೆ, ಮಾನವ

ಜೀವನ ಮಾತ್ರ ಈ ಅನುಗ್ರಹದಿಂದ ಏಕೆ ವಂಚಿತವಾಗಿದೆ?

ಇದೊಂದು ಅತ್ಯಂತ ಮಹತ್ವದ ಪ್ರಶ್ನೆಯಾಗಿದ್ದು ಇದನ್ನು ಬಗೆಹರಿಸಲು ಜನರಿಗೆ ತುಂಬಾ ಪೇಚುಂಟಾಗಿದೆ. ನಾನೀಗ ಸಂಪೂರ್ಣ ಶಾಂತಚಿತ್ತದಿಂದ ಇದನ್ನು ಉತ್ತರಿಸಲು ಬಯಸುತ್ತೇನೆ. ಮಾನವನು ತನ್ನ ಜೀವನವನ್ನು ಯಥಾರ್ಥಕ್ಕೆ ಮತ್ತು ನಿಸರ್ಗ ನಿಯಮಕ್ಕೆ ವಿರುದ್ಧವಾಗಿ ಮಾಡಿಕೊಂಡಿದ್ದುದರಿಂದ ಕಷ್ಟಕ್ಕೊಳಗಾಗಿದ್ದಾನೆ. ಅವನು ಅದನ್ನು ಪುನಃ ಯಥಾರ್ಥಕ್ಕನುಸಾರ ಸರಿಪಡಿಸಿಕೊಳ್ಳುವ ತನಕ ಎಂದೆಂದಿಗೂ ಅವನಿಗೆ ಶಾಂತಿ ಲಭಿಸದೆಂಬುದೇ ನನ್ನ ಸಂಕ್ಷಿಪ್ತ ಉತ್ತರ.

ನೀವು ವೇಗವಾಗಿ ಚಲಿಸುತ್ತಿರುವ ಉಗಿಬಂಡಿಯ ಬಾಗಿಲನ್ನು ನಿಮ್ಮ ಮನೆಯ ಬಾಗಿಲೆಂದು ಭಾವಿಸಿ, ಅದನ್ನು ತೆರೆದು, ನಿಮ್ಮ ಮನೆಬಾಗಿಲಿನಿಂದ ಅಂಗಳಕ್ಕೆ ಕಾಲಿಟ್ಟಂತೆ ಅದರ ಹೊರಗೆ ಕಾಲಿಟ್ಟರೆ, ನಿಮ್ಮ ಈ ಅಪಗ್ರಹಿಕೆಯಿಂದ ಉಗಿಬಂಡಿಯ ಬಾಗಿಲು ನಿಮ್ಮ ಮನೆಯ ಬಾಗಿಲು ಆಗಲಾರದು. ನೀವು ಬೀಳುವ ಆ ಸ್ಥಳವು ನಿಮ್ಮ ಮನೆಯಂಗಳವೂ ಆಗಲಾರದು. ನೀವು ನಿಮ್ಮಷ್ಟಕ್ಕೆ ಏನು ತಿಳಿದುಕೊಂಡರೂ ವಾಸ್ತವಿಕತೆ ಬದಲಾಗದು. ಓಡುತ್ತಿರುವ ಉಗಿಬಂಡಿಯ ಬಾಗಿಲಿನಿಂದ ಹೊರಗೆ ಕಾಲಿಟ್ಟರೆ, ಆಗಬೇಕಾದ ಪರಿಣಾಮ ಆಗಿಯೇ ತೀರುವುದು. ನಿಮ್ಮ ಕೈಕಾಲು ಮುರಿದ ಬಳಿಕವೂ ಅಥವಾ ತಲೆಯೊಡೆದ ಬಳಿಕವೂ ನೀವು ಮಾಡಿದುದು ತಪ್ಪೆಂದು ಒಪ್ಪಿಕೊಳ್ಳಲು ಸಿದ್ಧರಾಗದಿದ್ದರೂ ಸರಿಯೇ.

ಅದೇ ರೀತಿ ಈ ಜಗತ್ತಿಗೆ ದೇವನೇ ಇಲ್ಲವೆಂದು ತಿಳಿದುಕೊಂಡರೆ, ನೀವೇ ಸ್ವತಃ ದೇವರೆಂದುಕೊಂಡರೆ ಅಥವಾ ದೇವನ ಹೊರತು ಬೇರೆ ಯಾರನ್ನಾದರೂ ದೇವರೆಂದು ಒಪ್ಪಿಕೊಂಡರೆ ವಾಸ್ತವಿಕತೆಯು ಬದಲಾಗದು. ದೇವನು ದೇವನಾಗಿಯೇ ಇರುವನು. ನೀವು ಕೇವಲ ಅವನ ಪ್ರಜೆಯಾಗಿ ಜೀವಿಸುತ್ತಿರುವ ಈ ಅಗಾಧ ಸಾಮ್ರಾಜ್ಯವು ಅವನ ಅಂಕೆಯಲ್ಲೇ ಇರುವುದು. ನಿಮ್ಮ ತಪ್ಪು ಗ್ರಹಿಕೆಯ ಕಾರಣದಿಂದ ನೀವು ಅನುಸರಿಸುವ ಜೀವನ ವಿಧಾನದ ಕಹಿ ಫಲವನ್ನು ನೀವೇ ಅನುಭವಿಸ ಬೇಕಾದೀತು. ನೀವು

ಕಷ್ಟಗಳನ್ನು ಅನುಭವಿಸಿದ ನಂತರವೂ ನಿಮ್ಮ ಅಸಮರ್ಪಕ ಜೀವನವನ್ನು ಸಮರ್ಪಕವೆಂದು ಭಾವಿಸಿದರೂ ಸರಿಯೇ.

ನಾನು ಹಿಂದೆ ಪ್ರಸ್ತಾಪಿಸಿರುವ ವಿಷಯವನ್ನು ಇನ್ನೊಮ್ಮೆ ಮನಸ್ಸಿಗೆ ತಂದುಕೊಳ್ಳಿರಿ. ಇತರರು ಜಗದೊಡೆಯನನ್ನಾಗಿ ಮಾಡಿದ್ದರಿಂದ ಜಗದೊಡೆಯನು ಜಗದೊಡೆಯನಾದುದಲ್ಲ. ನೀವು ಅವನನ್ನು ದೇವನೆಂದು ನಂಬಿದಾಗ ಮಾತ್ರ ಅವನು ದೇವನಾಗಬಲ್ಲನೆಂದೇನೂ ಇಲ್ಲ. ನೀವು ನಂಬಿದರೂ ನಂಬದಿದ್ದರೂ ಅವನು ದೇವನೇ. ಅವನ ದೇವತ್ವ ಅವನ ಸ್ವಂತ ಬಲದಿಂದ ಸ್ಥಾಪಿತವಾಗಿದೆ. ನಿಮ್ಮನ್ನೂ ಇಡೀ ಜಗತ್ತನ್ನೂ ಆತನೇ ಸೃಷ್ಟಿಸಿದ್ದಾನೆ. ಈ ಭೂಮಿ, ಈ ಸೂರ್ಯ–ಚಂದ್ರರು ಮತ್ತು ಈ ವಿಶ್ವವಿಡೀ ಅವನ ಆಜ್ಞಾಧೀನವಾಗಿವೆ. ಈ ಜಗತ್ತಿನಲ್ಲಿ ಕಾರ್ಯವೆಸಗುತ್ತಿರುವ ಶಕ್ತಿಗಳೆಲ್ಲವೂ ಅವನ ಆಜ್ಞಾನುವರ್ತಿಗಳು. ನಿಮ್ಮ ಜೀವನಾಧಾರವಾಗಿರುವ ಸಕಲವೂ ಅವನ ಅಂಕೆಯಲ್ಲಿವೆ. ನಿಮ್ಮ ಸ್ವಂತ ಅಸ್ತಿತ್ವವೂ ಅವನ ಅಧಿಕಾರಹಸ್ತದಲ್ಲಿದೆ. ಈ ವಸ್ತುಸ್ಥಿತಿಯನ್ನು ನೀವು ಬದಲಾಯಿಸಲಾರಿರಿ. ನೀವು ಅದನ್ನು ಒಪ್ಪಿದರೂ ಅದು ಸತ್ಯವೇ. ನೀವು ಅವುಗಳಿಂದ ಕಣ್ಣು ಮುಚ್ಚಿಕೊಂಡರೂ ಅದು ಸತ್ಯವೇ. ನೀವು ಅದರ ಬದಲಿಗೆ ಇನ್ನೇನಾದರೂ ಎಣಿಸಿಕೊಂಡರೂ ಸತ್ಯವು ಬದಲಾಗದು.

ನೀವು ಈ ಸತ್ಯವನ್ನು ಒಪ್ಪಿಕೊಂಡು ಈ ಪರಮಾರ್ಥದೊಳಗಿರುವ ನಿಮ್ಮ ನೆಲೆಯನ್ನು ಯಥಾರೂಪದಲ್ಲಿ ಸ್ವೀಕರಿಸಿ ಕೊಂಡರೆ, ನಿಮ್ಮ ಜೀವನ ಸುಗಮವಾಗುವುದು. ನಿಮಗೆ ಶಾಂತಿ ಸಿಗು ವುದು, ನೆಮ್ಮದಿ ಸಿಗುವುದು, ಸಂತೃಪ್ತಿಯೊದಗುವುದು, ನಿಮ್ಮ ಜೀವನವೆಂಬ ಯಂತ್ರದ ಎಲ್ಲ ಭಾಗಗಳೂ ಸರಿಯಾಗಿ ಕೆಲಸ ಮಾಡುವುವು. ಆದರೆ, ನೀವು ಪರಮಾರ್ಥಕ್ಕೆ ವಿರುದ್ಧವಾಗಿರುವ ಯಾವುದಾದರೂ ನೆಲೆಯನ್ನು ಸ್ವೀಕರಿಸಿಕೊಂಡರೆ, ಅದರ ಪರಿಣಾಮವು ಚಲಿಸುವ ಉಗಿಬಂಡಿಯ ಬಾಗಿಲನ್ನು ನಿಮ್ಮ ಮನೆಯ ಬಾಗಿಲೆಂದೆನಿಸಿ ಹೊರಗೆ ಕಾಲಿಟ್ಟಂತಾಗುವುದು. ನೋವುಂಟಾ ಗುವುದು ನಿಮಗೆ. ನಿಮ್ಮ ಕೈಕಾಲುಗಳೇ ಮುರಿಯುವುವು. ನಿಮ್ಮ ತಲೆಯೇ

ಒಡೆದು ಹೋಗುವುದು. ನಿಮಗೆ ಕಷ್ಟ ಅನುಭವಿಸಬೇಕಾಗುವುದು. ವಸ್ತುಸ್ಥಿತಿ ಮಾತ್ರ ಯಥಾಸ್ಥಿತಿಯಲ್ಲಿರುವುದು.

ಹಾಗಾದರೆ ಈ ವಸ್ತುಸ್ಥಿತಿಗೆ ಅನುಸಾರವಾಗಿ ನಮ್ಮ ನೈಜ ನೆಲೆ ಯಾವುದೆಂದು ನೀವು ಕೇಳಬಹುದು. ನಾನು ಕೆಲವೇ ಮಾತುಗಳಲ್ಲಿ ಅದನ್ನು ವಿವರಿಸುತ್ತೇನೆ. ನೀವು ಸಂಬಳ ಕೊಟ್ಟು ಒಬ್ಬ ನೌಕರನನ್ನು ಸಾಕುತ್ತೀರಾದರೆ, ಅವನ ನೈಜ ನೆಲೆ ಯಾವುದು? ನಿಮ್ಮ ನೌಕರಿ ಮಾಡುವುದು, ನಿಮ್ಮ ಆಜ್ಞಾನುಸರಣೆ ಮಾಡುವುದು, ನಿಮ್ಮಿಚ್ಛೆಯಂತೆ ಕೆಲಸ ಮಾಡುವುದು ಮತ್ತು ನೌಕರಿಯ ಮೇರೆಯನ್ನು ಮೀರದಿರುವುದು ಅಲ್ಲವೇ? ನೌಕರನ ಕೆಲಸ ಸೇವೆಯಲ್ಲದೆ ಮತ್ತೇನು? ನೀವು ಮೇಲಧಿಕಾರಿಯಾಗಿದ್ದರೆ ನಿಮ್ಮ ಕೈಕೆಳಗಿನವನ ಕೆಲಸವೇನು? ಅಧೀನನಾಗಿದ್ದು ಕೆಲಸ ಮಾಡುವುದು ಮತ್ತು ಅಧಿಕಾರದ ಲಾಲಸೆಯಲ್ಲಿಲ್ಲದಿ ರುವುದು. ನೀವೊಬ್ಬ ಭೂಮಾಲಿಕನಾಗಿದ್ದರೆ ನಿಮ್ಮ ಆಸ್ತಿಯ ಬಗ್ಗೆ ನಿಮ್ಮ ಅಪೇಕ್ಷೆ ಏನಿರುವುದು? ಅದರಲ್ಲಿ ನಿಮ್ಮಿಚ್ಛೆಗೆ ವಿರೋಧವಾಗಿ ಏನೂ ಆಗಬಾರದೆಂದಲ್ಲವೇ? ನಿಮ್ಮ ಮೇಲೆ ಒಬ್ಬ ಅರಸನ ಅಧಿಕಾರವಿದ್ದು, ಸಕಲ ಅಧಿಕಾರಗಳೂ ಅವನ ಹಸ್ತದಲ್ಲೇ ಇದ್ದಾಗ ಅಂತಹ ಅರಸ ಸ್ವತಃ ಇರುವಾಗ ನಿಮ್ಮ ನೆಲೆಯೇನಾಗಿರಬಹುದು? ನೇರವಾಗಿ ಅವನ ಪ್ರಜೆಯೆಂದು ಒಪ್ಪಿಕೊಂಡು ಅರಸನ ಅಪ್ಪಣೆಗೆ ವಿರುದ್ಧ ನಡೆಯದಿರುವುದಲ್ಲದೆ ನೀವು ಆ ಅರಸನ ಸಾಮ್ರಾಜ್ಯದೊಳಗಿದ್ದು ತಾನೇ ಅರಸನೆಂದು ಸಾರಿದರೆ ಅಥವಾ ಇನ್ನೊಬ್ಬನನ್ನು ಅರಸನೆಂದು ಒಪ್ಪಿಕೊಂಡು ಅವನ ಆಜ್ಞೆಯಂತೆ ನಡೆದರೆ ನೀವು ರಾಜದ್ರೋಹಿಯೆನಿಸುವಿರಿ.

ರಾಜದ್ರೋಹಿಯೊಂದಿಗೆ ಹೇಗೆ ವ್ಯವಹರಿಸಲಾಗುತ್ತಿದೆಯೆಂಬುದು ನಿಮಗೆ ಗೊತ್ತೇ ಇದೆ. ದೇವನ ಈ ಸಾಮ್ರಾಜ್ಯದಲ್ಲಿ ನಿಮ್ಮ ನೈಜ ನೆಲೆಯೇನೆಂಬುದನ್ನು ಈ ಉದಾಹರಣೆಗಳಿಂದ ನೀವು ಚೆನ್ನಾಗಿ ತಿಳಿದುಕೊಳ್ಳಬಹುದು. ದೇವನು ನಿಮ್ಮನ್ನು ಸೃಷ್ಟಿಸಿದನು. ಸ್ವಾಭಾವಿಕವಾಗಿ ಅವನ ಇಚ್ಛೆಗನುಸಾರ ನಡೆಯುವುದಲ್ಲದೆ ಇನ್ನಾವ ನೆಲೆಯೂ ನಿಮ್ಮದಲ್ಲ.

ಅವನು ನಿಮ್ಮನ್ನು ಪೋಷಿಸುತ್ತಿದ್ದಾನೆ. ನೀವು ಅವನ ಭಂಡಾರದಿಂದಲೇ ವೇತನ ಪಡೆಯುತ್ತಿರುವಿರಿ. ನಿಮ್ಮ ನೆಲೆಯು ಅವನ ನೌಕರನದ್ದಲ್ಲದೆ ಬೇರೇನೂ ಅಲ್ಲ. ಅವನು ನಿಮ್ಮ ಮತ್ತು ಇಡೀ ವಿಶ್ವದ ಮೇಲಧಿಕಾರಿ. ಅವನ ಅಧಿಕಾರದಲ್ಲಿ ನೀವು ಕೇವಲ ಅಧೀನರಾಗಿರುತ್ತೀರಿ.

ಈ ಭೂಮಿ–ಆಕಾಶಗಳು ಅವನ ಆಸ್ತಿ. ಈ ಆಸ್ತಿಯಲ್ಲಿ ನಿಮ್ಮ ಇಚ್ಛೆಯನ್ನು ನಡೆಸುವ ಹಕ್ಕೇ ನಿಮಗಿಲ್ಲ. ನಿಮ್ಮಿಚ್ಛೆಯನ್ನು ನಡೆಸಲು ಪ್ರಯತ್ನಿಸಿದರೆ, ಅವಮಾನಿತರಾಗಬೇಕಾಗುವುದು. ಈ ಸಾಮ್ರಾಜ್ಯದಲ್ಲಿ ಅವನ ಸಾರ್ವಭೌಮತೆಯು ಅವನ ಸ್ವಯಂ ಬಲದಿಂದ ಸ್ಥಾಪಿಸಲ್ಪಟ್ಟಿವೆ. ಭೂಮಿ–ಆಕಾಶಗಳ ಎಲ್ಲ ಇಲಾಖೆಗಳೂ ಅವನ ಕೈಕೆಳಗಿವೆ. ನಿಮಗೆ ಇಷ್ಟವಿದ್ದರೂ ಇಲ್ಲದಿದ್ದರೂ ನೀವು ಅವನ ಆಜನ್ಮ ಪ್ರಜೆಗಳು. ನೀವಷ್ಟೇ ಅಲ್ಲ, ಸಕಲ ಮಾನವರ ಸ್ಥಿತಿಯೂ ಪ್ರಜೆಗಳದ್ದೇ ಅಲ್ಲದೆ ಇನ್ನೇನೂ ಇಲ್ಲ. ಈ ಸಾಮ್ರಾಜ್ಯದಲ್ಲಿ ಅವನ ವಚನವೇ ಶಾಸನ. ಅವನ ಮಾತೇ ಅಪ್ಪಣೆ. ಪ್ರಜೆಗಳಲ್ಲಿ ಯಾರಿಗೂ ತಾನು ರಾಜಾಧಿರಾಜ (ಹಿಸ್ ಮೆಜೆಸ್ಟಿ) ಆಗಿದ್ದೇನೆ, ಮಹಾಮಹಿಮ (ಹಿಸ್ ಹೈನೆಸ್) ಆಗಿದ್ದೇನೆ, ಸರ್ವಾಧಿಕಾರಿಯಾಗಿದ್ದೇನೆ ಅಥವಾ ನಿರಂಕುಶನಾಗಿದ್ದೇನೆ ಎನ್ನುವ ಹಕ್ಕಿಲ್ಲ. ಯಾವುದೇ ಪಾರ್ಲಿಮೆಂಟಿಗಾಗಲೀ ಅಸೆಂಬ್ಲಿಗಾಗಲೀ ಕೌನ್ಸಿಲ್‌ಗಾಗಲೀ ಈ ಸಾಮ್ರಾಜ್ಯದಲ್ಲಿ ದೇವನ ಹೊರತು ತಮ್ಮ ಶಾಸನಗಳನ್ನು ಸಿದ್ಧಪಡಿಸಿ ಅವನ್ನು ಅನುಸರಿಸಬೇಕೆಂದು ದೇವಪ್ರಜೆಗಳಿಗೆ ಹೇಳುವ ಅಧಿಕಾರವಿಲ್ಲ. ದೇವಾಜ್ಞೆಗಳನ್ನು ಧಿಕ್ಕರಿಸಿ ತನ್ನ ಆಜ್ಞೆಗಳನ್ನು ಜಾರಿಗೊಳಿಸುವ ಮತ್ತು ಅವುಗಳನ್ನು ಅನುಸರಿಸಬೇಕೆಂದು ಹೇಳುವ ಹಕ್ಕು ಯಾವ ಲೌಕಿಕ ಸರಕಾರಕ್ಕೂ ಇಲ್ಲ. ಸಾಮ್ರಾಟನ ಪ್ರಜೆಯಾಗಿರುವುದನ್ನು ಬಿಟ್ಟು ತಾನೇ ಸಾಮ್ರಾಟನೆನಿಸಿ ಕೊಳ್ಳುವ ಸುಳ್ಳುಗಾರರ ಪ್ರಜೆಗಳಾಗಲು ಒಪ್ಪಿಕೊಳ್ಳುವುದು ಯಾವ ವ್ಯಕ್ತಿಗೂ ಯಾವ ಸಮುದಾಯಕ್ಕೂ ಸೂಕ್ತವಲ್ಲ. ದೊರೆಯ ಶಾಸನಗಳನ್ನು ಬಿಟ್ಟು ಮಿಥ್ಯ ಶಾಸಕರ ಶಾಸನಗಳನ್ನು ಒಪ್ಪಿಕೊಳ್ಳುವುದು, ಸಾಕ್ಷಾತ್ ಪ್ರಭುವನ್ನು ಉಪೇಕ್ಷಿಸಿ ಕೃತಕ ಪ್ರಭುಗಳ ಆಜ್ಞಾಪಾಲನೆ ಮಾಡುವುದು, ಇವೆಲ್ಲ ರಾಜದ್ರೋಹದ ರೂಪಗಳು. ತಾನೇ ಸಾಮ್ರಾಟನು ಎಂದುಕೊಳ್ಳುವುದು, ಇತರರು ಹಾಗೆನಿಸಿಕೊಳ್ಳುವುದನ್ನು ಒಪ್ಪಿಕೊಳ್ಳುವುದು, ಇವೆರಡೂ ಪ್ರಜೆಯ

ರಾಜದ್ರೋಹ ವೆನಿಸುವುದು. ಆದರೆ ಇಬ್ಬರಿಗೂ ಶಿಕ್ಷೆ ಸಿಗುವುದಂತೂ ಖಂಡಿತ. ಅದು ಕೂಡಲೇ ಸಿಗಬಹುದು ಅಥವಾ ತಡವಾಗಿ ಸಿಗಬಹುದು.

ಸಕಲ ಮಾನವರ ಜುಟ್ಟು ದೇವನ ಅಂಕೆಯಲ್ಲಿದೆ. ಆತ ಇಷ್ಟ ಬಂದಾಗ ಅದನ್ನು ಹಿಡಿದೆಳೆದುಕೊಳ್ಳಬಲ್ಲನು. ಭೂಮಿ–ಆಕಾಶಗಳ ಈ ಸಾಮ್ರಾಜ್ಯದಲ್ಲಿ ತಪ್ಪಿಸಿಕೊಂಡು ಓಡಿಹೋಗುವ ಶಕ್ತಿ ಯಾರಿಗೂ ಇಲ್ಲ. ಅವನಿಂದ ತಪ್ಪಿಸಿಕೊಂಡು ಓಡಿ ನೀವೆಲ್ಲಿಯೂ ಆಶ್ರಯ ಹೊಂದಲಾರಿರಿ. ನೀವು ಮಣ್ಣು ಪಾಲಾಗಿ ನಿಮ್ಮ ಪ್ರತಿಯೊಂದು ಕಣವೂ ಚೆಲ್ಲಾಪಿಲ್ಲಿಯಾಗಿ ಚದುರಿ ಹೋದರೂ ನೀವು ಬೆಂಕಿಯಲ್ಲಿ ಸುಟ್ಟು ಬೂದಿಯಾಗಿ ನಿಮ್ಮ ಬೂದಿಯು ಗಾಳಿಯಲ್ಲಿ ಹಾರಿ ಹೋದರೂ ನೀವು ನೀರಲ್ಲಿ ಮುಳುಗಿ ಮೀನುಗಳ ಆಹಾರವಾಗಿ ಬಿಟ್ಟರೂ ಅಥವಾ ಸಮುದ್ರದ ನೀರಿನಲ್ಲಿ ಕರಗಿ ಹೋದರೂ ನಿಮ್ಮನ್ನು ದೇವನು ಎಲ್ಲೆಡೆಗಳಿಂದಲೂ ಹಿಡಿದೆಳೆದು ತರುವನು.

ಗಾಳಿಯು ಅವನ ದಾಸ. ಭೂಮಿ ಅವನ ಅಡಿಯಾಳು. ನೀರು ಮತ್ತು ಮತ್ಸ್ಯಗಳು ಅವನ ಆಜ್ಞೆಗಳಿಗೆ ಅಧೀನರು. ಒಂದು ಸೂಚನೆ ಸಿಕ್ಕಿದೊಡನೆ ನೀವು ಎಲ್ಲಾ ದಿಕ್ಕುಗಳಿಂದಲೂ ಸೆರೆಹಿಡಿದು ತರಲ್ಪಡುವಿರಿ. ಅನಂತರ, "ನೀವು ನನ್ನ ಪ್ರಜೆಗಳಾಗಿರುತ್ತಾ ಸಾಮ್ರಾಟರೆನಿಸುವ ಹಕ್ಕನ್ನು ಎಲ್ಲಿಂದ ಪಡೆದಿರಿ? ನನ್ನ ಸಾಮ್ರಾಜ್ಯದಲ್ಲಿ ನಿಮ್ಮ ಶಾಸನಗಳನ್ನು ನಡೆಸಲಿಕ್ಕೆ ನೀವು ಯಾರು? ನನ್ನ ದಾಸರಾಗಿ ಇತರರ ದಾಸ್ಯ–ಆರಾಧನೆ ಮಾಡಲು ನೀವು ಹೇಗೆ ಒಪ್ಪಿದಿರಿ? ನನ್ನಿಂದ ಆಹಾರ ಪಡೆದು ಇತರರನ್ನು ಅನ್ನದಾತರೆಂದು ಹೇಗೆ ತಿಳಿದುಕೊಂಡಿರಿ? ನನ್ನ ಗುಲಾಮರಾಗಿ ಬೇರೆಯವರ ಸೇವೆಯನ್ನೇಕೆ ಮಾಡಿದಿರಿ? ನನ್ನ ಸಾಮ್ರಾಜ್ಯದೊಳಗಿರುತ್ತ ಇತರರ ಕಾನೂನನ್ನು ಕಾನೂನೆಂದು ಹೇಗೆ ಪರಿಗಣಿಸಿದಿರಿ ಮತ್ತು ಅವರ ಆಜ್ಞಾನುಸರಣೆ ಹೇಗೆ ಮಾಡಿದಿರಿ? ಈ ಬಂಡಾಯ ನೀತಿಯು ನಿಮ್ಮ ಮಟ್ಟಿಗೆ ಹೇಗೆ ಉಚಿತವೆನಿಸುವುದು?" ಎಂದು ಆತನು ನಿಮ್ಮ ಪೈಕಿ ಪ್ರತಿಯೊಬ್ಬನನ್ನು ಕರೆದು ವಿಚಾರಿಸುವನು. ಈಗ ನೀವೇ ಹೇಳಿರಿ, ನಿಮ್ಮ ಪೈಕಿ ಯಾರ ಬಳಿಯಲ್ಲೇ ಆದರೂ ಈ ಪ್ರಶ್ನೆಗಳಿಗೆ ಏನು ಉತ್ತರವಿದೆ?

ಅಲ್ಲಿ ಕಾನೂನನ್ನು ತಿರುವುಮುರುವುಗೊಳಿಸಿ ರಕ್ಷಿಸುವ ದಾರಿ ಹುಡುಕುವ ಯಾವ ವಕೀಲರಿದ್ದಾರೆ? ನಿಮ್ಮನ್ನು ರಾಜದ್ರೋಹವೆಂಬ ಮಹಾಪರಾಧದ ಶಿಕ್ಷೆಯಿಂದ ತಪ್ಪಿಸುವಂತಹ ಯಾವ ಶಿಫಾರಸಿನ ಮೇಲೆ ನೀವು ಭರವಸೆಯನ್ನಿರಿಸುತ್ತೀರಿ?

## ಆಕ್ರಮಣಕ್ಕೆ ಕಾರಣ

ಇಲ್ಲಿ ಅಧಿಕಾರದ ಪ್ರಶ್ನೆ ಮಾತ್ರವೇ ಅಲ್ಲ, ದೇವನ ಈ ಸೃಷ್ಟಿಯಲ್ಲಿ ಮಾನವನು ಸಾರ್ವಭೌಮ, ಶಾಸಕ ಅಥವಾ ಪ್ರಭುವೆನಿಸುವ ಅರ್ಹತೆ ಹೊಂದಿರುತ್ತಾನೆಯೇ ಎಂಬ ಪ್ರಶ್ನೆಯೂ ಗಮನಾರ್ಹವಾಗಿದೆ. ನಾನು ಈಗಾಗಲೇ ಹೇಳಿದಂತೆ ಯಂತ್ರದ ಜ್ಞಾನವಿಲ್ಲದವನು ಒಂದು ಯಂತ್ರವನ್ನು ನಡೆಸತೊಡಗಿದರೆ ಅದನ್ನು ಕೆಡಿಸಿ ಬಿಡುವನೆಂಬುದು ಎಲ್ಲರಿಗೂ ತಿಳಿದ ವಿಷಯ. ಮೋಟಾರು ವಾಹನ ನಡೆಸಲು ಬಾರದವರ ಕೈಯಲ್ಲಿ ಒಂದು ಕಾರನ್ನು ನಡೆಸಲು ಕೊಟ್ಟು ಈ ಮೂರ್ಖತನದ ಪರಿಣಾಮವೇನಾಗುವುದೆಂದು ನೋಡಿಕೊಳ್ಳಿರಿ.

ಸರಿಯಾದ ಜ್ಞಾನವಿಲ್ಲದೆ ಕಬ್ಬಿಣದ ಒಂದು ಯಂತ್ರವನ್ನೂ ನಡೆಸಲು ಸಾಧ್ಯವಿಲ್ಲ. ಅಂದ ಬಳಿಕ ಅತ್ಯಂತ ಜಟಿಲ ಮಾನಸಿಕ ಶಕ್ತಿಗಳನ್ನು ಹೊಂದಿರುವಂತಹ ಮಾನವನ ಜೀವನಕ್ಕೆ ಹಲವಾರು ವಿಭಾಗಗಳಿರುವಾಗ, ಪ್ರತಿ ವಿಭಾಗದಲ್ಲಿ ಲಕ್ಷಾಂತರ ಪೇಚುಗಳಿರುವಾಗ ಇತರರನ್ನು ಅರಿಯುವುದಂತಿರಲಿ– ಸ್ವತಃ ತಮ್ಮನ್ನು ತಾವೇ ಸರಿಯಾಗಿ ಅರಿಯಲಾಗದವರು ಇಂತಹ ತೊಡಕುಗಳಿಂದ ಕೂಡಿದ ಯಂತ್ರವನ್ನು ನಡೆಸುವುದಾದರೂ ಹೇಗೆ? ಇಂತಹ ಮೂರ್ಖರು ಶಾಸಕರಾದಾಗ, ಇಂತಹ ತಿಳಿಗೇಡಿಗಳು ಮಾನವ ಜೀವನ ಬಂಡಿಯ ಚಾಲಕರಾಗಲು ಹೊರಟಾಗ, ಅದರ ಪರಿಣಾಮವು ಅಸಮರ್ಥನೊಬ್ಬನು ಮೋಟಾರು ಕಾರನ್ನು ನಡೆಸಿದುದರ ಪರಿಣಾಮಕ್ಕಿಂತ ಭಿನ್ನವಾಗಿರಲು ಸಾಧ್ಯವೇ? ಆದುದರಿಂದಲೇ ದೇವಶಾಸನಗಳ ಬದಲಿಗೆ ಮಾನವ ನಿರ್ಮಿತ ಶಾಸನಗಳನ್ನು ಮಾನ್ಯ ಮಾಡಿಕೊಂಡಲ್ಲೂ ದೇವಾನುಸರಣೆಯಿಂದ ನಿಶ್ಚಿಂತರಾಗಿ ಮಾನವನು ಅಧಿಕಾರ ನಡೆಸುತ್ತಿರುವಲ್ಲೂ

ಮಾನವಾಜ್ಞೆಗಳನ್ನು ಪಾಲಿಸುತ್ತಿರುವಲ್ಲೂ ನೆಮ್ಮದಿ ಇಲ್ಲ. ಸುಖ-ಶಾಂತಿಗಳಿಲ್ಲ. ಎಲ್ಲೂ ಜೀವನಯಂತ್ರ ಸರಾಗವಾಗಿ ನಡೆಯುತ್ತಿಲ್ಲ. ಅಲ್ಲೆಲ್ಲ ರಕ್ತಪಾತಗಳಾಗುತ್ತಿವೆ. ಅಕ್ರಮ, ಅನೀತಿ, ಅನ್ಯಾಯಗಳಾಗುತ್ತಿವೆ. ಸುಲಿಗೆ-ದರೋಡೆಗಳಾಗುತ್ತಿವೆ. ಮಾನವನು ಮಾನವರ ರಕ್ತವನ್ನು ಹೀರುತ್ತಿದ್ದಾನೆ. ಚಾರಿತ್ರ್ಯ ಹನನವಾಗುತ್ತಿದೆ. ಆರೋಗ್ಯ ಕೆಡುತ್ತಿದೆ. ಮಾನವನಿಗೆ ದೇವದತ್ತವಾಗಿ ಲಭಿಸಿರುವ ಸಕಲ ಶಕ್ತಿ-ಸಾಮರ್ಥ್ಯಗಳನ್ನು ರಚನಾತ್ಮಕ ಕಾರ್ಯಗಳಿಗಾಗಿ ವಿನಿಯೋಗಿಸುವ ಬದಲಿಗೆ ವಿನಾಶಕ್ಕಾಗಿ ಬಳಸಲಾಗುತ್ತಿದೆ.

ಯಂತ್ರಜ್ಞಾನವಿಲ್ಲದ ಒಂದು ಮಗು ಅತ್ಯಂತ ಹುರುಪಿನಿಂದ ತನಗೆ ಪರಿಚಯವಿಲ್ಲದ ಯಂತ್ರವನ್ನು ನಡೆಸಲು ಹೊರಟ ಹಾಗೆ ಮಾನವನು ತನ್ನ ಜೀವನ ಯಂತ್ರವನ್ನು ತಾನೇ ಸ್ವತಂತ್ರನಾಗಿ ನಡೆಸಲಾರಂಭಿಸಿದುದರಿಂದಲೇ ಈ ಜಗತ್ತು ಅವನ ಮಟ್ಟಿಗೆ ತಾನೇ ಮಾಡಿಕೊಂಡ ಒಂದು ಶಾಶ್ವತ ನರಕವಾಗಿ ಪರಿಣಮಿಸಿದೆ. ಈ ಯಂತ್ರವನ್ನು ನಿರ್ಮಿಸಿದಾತನಿಗೆ ಮಾತ್ರ ಅದರ ರಹಸ್ಯಗಳ ಅರಿವಿರುವುದು. ಅದರ ಸ್ವಭಾವದ ಜ್ಞಾನವಿರುವುದು ಅವನಿಗೆ ಮಾತ್ರ. ಮಾನವನು ತನ್ನ ಮೂರ್ಖತನವನ್ನು ಬಿಟ್ಟು, ತನ್ನ ಅಜ್ಞಾನವನ್ನು ಒಪ್ಪಿಕೊಂಡು ಆ ಯಂತ್ರ ನಿರ್ಮಾಪಕನೇ ತಯಾರಿಸಿದ ಕಾನೂನನ್ನು ಪಾಲಿಸಲಾರಂಭಿಸಿದರೆ, ಬಿಗಡಾಯಿಸಿರುವ ಪರಿಸ್ಥಿತಿಯ ಸುಧಾರಣೆಯಾಗಬಹುದು. ಅಲ್ಲವಾದರೆ ಈ ವಿಪತ್ತುಗಳಿಗೆ ಯಾವ ಮುಕ್ತಿಯೂ ಇಲ್ಲ.

## ಅನ್ಯಾಯಕ್ಕೆ ಕಾರಣವೇನು?

ಇನ್ನಷ್ಟು ಗಾಢವಾಗಿ ಅವಲೋಕಿಸಿದಾಗ ನಿಮ್ಮ ಜೀವನವು ಕೆಡುಕಿನಿಂದ ಆವೃತವಾಗಿರುವುದಕ್ಕೆ ಅಜ್ಞಾನವು ಕಾರಣವಾಗಿರುವಂತೆಯೇ ಇನ್ನೊಂದು ಕಾರಣವೂ ಇದೆಯೆಂದು ತಿಳಿಯುತ್ತದೆ. 'ಮನುಷ್ಯ' ಎಂಬುದು ಒಬ್ಬ ವ್ಯಕ್ತಿ, ಒಂದು ಕುಟುಂಬ ಅಥವಾ ಜನಾಂಗದ ಹೆಸರಲ್ಲ. ಜಗತ್ತಿನಾದ್ಯಂತ ವಾಸಿಸುತ್ತಿರುವವರೆಲ್ಲರೂ ಮನುಷ್ಯರೇ. ಅವರೆಲ್ಲರಿಗೂ ಬದುಕಿ ಬಾಳುವ ಹಕ್ಕಿದೆ. ಅವರೆಲ್ಲರಿಗೂ ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವ ಹಕ್ಕಿದೆ. ಶಾಂತಿ,

ನ್ಯಾಯ, ಮಾನ-ಮರ್ಯಾದೆಗಳನ್ನು ಪಡೆಯುವ ಹಕ್ಕು ಎಲ್ಲರಿಗೂ ಇದೆ.

ಮಾನವ ಕಲ್ಯಾಣವೆಂದರೆ ಒಬ್ಬ ವ್ಯಕ್ತಿಯ, ಒಂದು ಕುಟುಂಬದ ಅಥವಾ ಒಂದು ಜನಾಂಗದ ಕಲ್ಯಾಣವಲ್ಲ. ಸಮಸ್ತ ಮಾನವ ಕೋಟಿಯ ಕಲ್ಯಾಣ. ಒಬ್ಬನು ಸುಖಿಯಾಗಿದ್ದು ಹತ್ತು ಮಂದಿ ದುಃಖ ಪೀಡಿತರಾಗಿದ್ದರೆ ಜನರು ಸುಖದಲ್ಲಿದ್ದಾರೆನ್ನುವುದಲ್ಲ. ವಿಜಯವೆಂದರೆ ಇಡೀ ಮಾನವಕೋಟಿಯ ವಿಜಯ. ಒಂದು ಪಂಗಡ ಅಥವಾ ಒಂದು ಜನಾಂಗದ ವಿಜಯವಲ್ಲ. ಒಬ್ಬನ ವಿಜಯ ಅಥವಾ ಹತ್ತು ಮಂದಿಯ ವಿಜಯವನ್ನು ವಿಜಯವೆನ್ನುವುದಿಲ್ಲ. ಈ ವಾದ ಸರಿಯೆಂದು ನೀವು ಒಪ್ಪಿಕೊಳ್ಳುವಿರಾದರೆ, ಮಾನವ ಕೋಟಿಯ ವಿಜಯವು ಹೇಗೆ ಸಾಧ್ಯವೆಂದು ಚಿಂತಿಸಿರಿ. ನನ್ನ ಅಭಿಪ್ರಾಯದ ಪ್ರಕಾರ ಅದಕ್ಕಿರುವ ದಾರಿ ಒಂದೇ. ಸಕಲ ಮಾನವರು ಯಾರ ದೃಷ್ಟಿಯಲ್ಲಿ ಒಂದೇ ಆಗಿರುವರೋ ಅವನೇ ಮಾನವ ಜೀವನಕ್ಕೆ ಬೇಕಾದ ಶಾಸನವನ್ನು ತಯಾರಿಸಬೇಕು. ತನ್ನ ವೈಯಕ್ತಿಕ ಸ್ವಾರ್ಥವಿರಹಿತನಾದವನೂ ಯಾವುದೇ ಕುಲ, ಗೋತ್ರ, ವಂಶ, ದೇಶ, ಜನಾಂಗಗಳ ಹಿತಾಸಕ್ತಿಗಳಿಂದ ಬಂಧಿಸಲ್ಪಡದವನೂ ಎಲ್ಲರ ಹಕ್ಕು ಬಾಧ್ಯತೆಗಳನ್ನು ನ್ಯಾಯ, ನೀತಿಪೂರ್ವಕ ನಿಶ್ಚಯಿಸಿ ಕೊಡುವವನೂ ಆಜ್ಞೆ ಆದೇಶಗಳನ್ನು ಕೊಡುವುದರಲ್ಲಿ ತನ್ನ ಅಜ್ಞಾನದಿಂದಾಗಿ ತಪ್ಪುಗಳನ್ನು ಮಾಡದವನೂ ತನ್ನ ಸ್ವೇಚ್ಛೆಯಿಂದಾಗಿ ಪ್ರಭುತ್ವದ ಅಧಿಕಾರಗಳಿಂದ ಅನುಚಿತ ಲಾಭಗಳಿಸಿಕೊಳ್ಳದವನೂ ಒಬ್ಬನ ಮಿತ್ರ ಇನ್ನೊಬ್ಬನ ಶತ್ರು-ಒಬ್ಬನ ಪಕ್ಷಪಾತಿ ಇನ್ನೊಬ್ಬನ ವಿರೋಧಿಯಾಗಿರದವನೂ ಒಬ್ಬನ ಕಡೆಗೆ ಒಲವು ಮತ್ತು ಇನ್ನೊಬ್ಬನ ಬಗ್ಗೆ ತಿರಸ್ಕಾರವಿಲ್ಲದಾತನೂ ನೀಡುವ ವಿಧಿ-ನಿಷೇಧಾಜ್ಞೆಗಳನ್ನು ಎಲ್ಲರೂ ಪಾಲಿಸಿದಾಗ ಮಾತ್ರ ಧರ್ಮ, ನ್ಯಾಯ, ಸಮಾನತೆಗಳು ನೆಲೆಸಬಹುದು.

ಹೀಗೆ ಸಕಲ ಮಾನವರಿಗೂ ಎಲ್ಲ ಜನಾಂಗಗಳಿಗೂ ಎಲ್ಲ ವರ್ಗಗಳಿಗೂ ಎಲ್ಲ ಪಂಗಡಗಳಿಗೂ ಅವರವರ ನ್ಯಾಯವಾದ ಹಕ್ಕು ಸಿಗುವುದು. ಅಕ್ರಮ, ಅನೀತಿಗಳ ಸಮೂಲ ನಾಶವಾಗಲಿಕ್ಕೆ ಇದೊಂದೇ ದಾರಿ. ಈ ಜಗತ್ತಿನಲ್ಲಿ ಇಂತಹ ನಿರ್ಮಲ, ನಿಷ್ಪಕ್ಷಪಾತ, ನಿಸ್ವಾರ್ಥ ಹಾಗೂ ಮಾನವ ದೌರ್ಬಲ್ಯ

ಗಳಿಂದ ವಿರಹಿತನಾದ ವ್ಯಕ್ತಿ ಸಿಗಬಹುದೇ? ಪ್ರಾಯಶಃ ನಿಮ್ಮಲ್ಲಿ ಯಾರೂ ನನ್ನ ಈ ಪ್ರಶ್ನೆಗೆ 'ಸಿಗಬಹುದು' ಎಂದು ಉತ್ತರ ಕೊಡಲು ಅವಸರಪಡಲಾರಿರಿ. ಈ ಶ್ರೇಷ್ಠತೆಯು ದೇವನಿಗೆ ಮಾತ್ರವಿದೆ. ಈ ಉತ್ತುಂಗತೆಯನ್ನು ಪಡೆದವನು ಅವನ ಹೊರತು ಇನ್ನೊಬ್ಬನಿಲ್ಲ. ಮಾನವನು ಎಷ್ಟು ದೊಡ್ಡ ಮನೋದಾರ್ಢ್ಯ ಹೊಂದಿದವನೇ ಆಗಿದ್ದರೂ ಅವನಿಗೆ ಸ್ವಂತ ಆಶಯಗಳೂ ಅಭಿರುಚಿಗಳೂ ಇದ್ದೇ ಇರುತ್ತವೆ. ಅವನು ಒಬ್ಬನೊಂದಿಗೆ ಗಾಢ ಸ್ನೇಹವಿರಿಸಿದ್ದರೆ, ಇನ್ನೊಬ್ಬನೊಂದಿಗೆ ಕಡಿಮೆ ಸ್ನೇಹ, ಮತ್ತೊಬ್ಬನೊಂದಿಗೆ ಸ್ನೇಹವಿರಿಸದೆ ಇರಬಹುದು. ಈ ದೌರ್ಬಲ್ಯಗಳಿಲ್ಲದ ಮನುಷ್ಯನೇ ಇಲ್ಲ. ಆದುದರಿಂದಲೇ ದೇವನ ಹೊರತು ಮಾನವ ಶಾಸನಗಳಿಗೆ ಮಾನ್ಯತೆ ಇರುವಲ್ಲೂ ದೇವಾಜ್ಞೆಗಳ ಬದಲಿಗೆ ಮಾನವಾಜ್ಞೆಗಳ ಅನುಸರಣೆ ಇರುವಲ್ಲೂ ಒಂದೊಂದು ವಿಧದ ಅತ್ಯಾಚಾರ, ಅನ್ಯಾಯಗಳು ಇದ್ದೇ ಇರುತ್ತವೆ.

ತಮ್ಮ ಸ್ವಂತ ಬಲದಿಂದ ಹೆಸರು ಪಡೆದಿರುವ ರಾಜಮನೆತನಗಳನ್ನು ನೋಡಿರಿ. ಅವರು ಬೇರೆ ಯಾರಿಗೂ ಇಲ್ಲದಂತಹ ವೈಭವ, ವರಮಾನ, ಅವಕಾಶಗಳ ಹಕ್ಕು ಮತ್ತು ಅಧಿಕಾರಗಳನ್ನು ತಮಗಾಗಿ ಕಾಯ್ದಿರಿಸಿಕೊಂಡಿದ್ದಾರೆ. ಅವರು ಕಾನೂನಿಗೆ ಅತೀತರು. ಅವರ ವಿರುದ್ಧ ನ್ಯಾಯಾಲಯಗಳಲ್ಲಿ ದಾವೆ ಹೂಡುವಂತಿಲ್ಲ. ಅವರು ಏನು ಮಾಡಿದರೂ ಅವರನ್ನು ಆರೋಪಿಸುವಂತಿಲ್ಲ. ಯಾವ ನ್ಯಾಯಾಲಯವೂ ಅವರಿಗೆ ಹಾಜರಾಗಲು ನೋಟಿಸು ರವಾನಿಸಲಾರದು. ಅವರು ಅಪರಾಧಗಳನ್ನೆಸಗುತ್ತಿರುವುದನ್ನು ಜಗತ್ತು ನೋಡುತ್ತಿದೆ. ಆದರೂ ಅರಸರು ಅಪರಾಧಾತೀತರೆಂದು ಭಾವಿಸುವವರಿದ್ದಾರೆ. ಹಾಗೆ ಹೇಳುವವರೂ ಇದ್ದಾರೆ. ಇವರು ಎಲ್ಲ ಮಾನವರಂತೆಯೇ ಇರುವ ಮಾನವರೆಂಬುದನ್ನು ಜಗತ್ತೇ ಕಾಣುತ್ತಿದೆ. ಆದರೆ ಇವರು ತಮ್ಮನ್ನು ದೇವರನ್ನಾಗಿಸಿ ಉನ್ನತ ಸ್ಥಾನಗಳಲ್ಲಿ ಕುಳಿತಿದ್ದಾರೆ. ಇವರೇ ಅನ್ನದಾತರೋ ಜೀವನ-ಮರಣಗಳೆಲ್ಲಾ ಇವರ ಕೈಯಲ್ಲಿರುವುದೋ ಎಂಬಂತೆ ಉಳಿದವರು ಕೈಕಟ್ಟಿ, ಶಿರಬಾಗಿಸಿ, ಭಯಭೀತರಾಗಿ ಇವರ ಮುಂದೆ ನಿಂತಿರುತ್ತಾರೆ. ಇವರು ಪ್ರಜೆಗಳ ಸಂಪತ್ತನ್ನು ಅನುಚಿತ ರೀತಿಯಿಂದ ಸುಲಿದು ತಮ್ಮ ಮಹಲುಗಳಿಗಾಗಿ, ವಾಹನಗಳಿಗಾಗಿ, ಸುಖಭೋಗಗಳಿಗಾಗಿ, ವಿಹಾರಗಳಿಗಾಗಿ

ಇಷ್ಟ ಬಂದಂತೆ ಖರ್ಚು ಮಾಡುತ್ತಾರೆ. ಅವರ ನಾಯಿಗಳಿಗೆ ಸಿಗುವಂತಹ ಉತ್ತಮ ಆಹಾರವು ಅವರಿಗಾಗಿ ದುಡಿಯುತ್ತಿರುವ ಪ್ರಜೆಗಳಿಗೆ ಸಿಗುವುದಿಲ್ಲ. ಇದು ನ್ಯಾಯವೇ? ಈ ಪದ್ಧತಿಯು ಸರ್ವ ಮಾನವರ ಹಿತಾಕಾಂಕ್ಷೆಗಳನ್ನು ಸಮಾನ ರೀತಿಯಿಂದ ಕಾಣುವಂತಹ ನ್ಯಾಯ–ನೀತಿಯುಳ್ಳವನಿಂದ ನಿಶ್ಚಯಿಸಲ್ಪಟ್ಟದ್ದಾಗಿರಬಹುದೇ?

ಪುರೋಹಿತರನ್ನೂ ಮಠಾಧಿಪತಿಗಳನ್ನೂ ನೋಡಿರಿ. ನವಾಬರನ್ನೂ ಸಿರಿವಂತರನ್ನೂ ನೋಡಿರಿ. ಜಾಗೀರುದಾರರನ್ನೂ ಭೂಮಾಲಿಕರನ್ನೂ ನೋಡಿರಿ. ಸಾಹುಕಾರರನ್ನೂ ಬಡ್ಡಿ ವ್ಯಾಪಾರಿಗಳನ್ನೂ ನೋಡಿರಿ. ಈ ವರ್ಗದವರೆಲ್ಲ ತಮ್ಮನ್ನು ತಾವೇ ಜನಸಾಮಾನ್ಯರಿಗಿಂತ ಉನ್ನತ ಮಟ್ಟದವರೆಂದು ತಿಳಿದುಕೊಳ್ಳುತ್ತಾರೆ. ಅವರ ಪ್ರಭಾವದಿಂದ ಜಗತ್ತಿನಲ್ಲಿ ಜಾರಿಗೆ ಬಂದಿರುವ ಕಾನೂನುಗಳಲ್ಲೆಲ್ಲ ಅವರಿಗೆ ಜನ ಸಾಮಾನ್ಯರಿಗಿಲ್ಲದ ವಿಶೇಷ ಹಕ್ಕುಗಳನ್ನು ನೀಡಲಾಗಿದೆ. ಇವರು ಶುದ್ಧರು, ಇತರರು ಅಶುದ್ಧರು ಇವರು ಮಾನ್ಯರು, ಇತರರು ಹೀನರು. ಇವರು ಉತ್ತಮರು, ಇತರರು ನೀಚರು. ಇವರು ಶೋಷಕರು, ಇತರರು ಶೋಷಿತರು. ಇವರ ವಿಷಯಾಸಕ್ತಿಗಳಿಗಾಗಿ ಜನಸಾಮಾನ್ಯರ ಪ್ರಾಣ, ಹಣ, ಮಾನ, ಮರ್ಯಾದೆಯೇ ಮೊದಲಾದ ಸರ್ವಸ್ವವನ್ನೂ ಬಲಿ ಕೊಡಬಹುದು. ಇಂತಹ ನಿಯಮಗಳು ನ್ಯಾಯ ಪರಿಪಾಲಕರಿಂದಾಗಲು ಸಾಧ್ಯವೇ? ಇವುಗಳಲ್ಲಿ ಸ್ವಾರ್ಥ, ಪಕ್ಷಪಾತಗಳು ಸ್ಪಷ್ಟವಾಗಿ ಎದ್ದು ತೋರುವುದಿಲ್ಲವೇ?

ತಮ್ಮ ಪ್ರಾಬಲ್ಯದಿಂದ ಇತರರನ್ನು ಗುಲಾಮರನ್ನಾಗಿ ಮಾಡಿರುವಂತಹ ಆಳುವ ಜನಾಂಗಗಳನ್ನು ನೋಡಿರಿ. ಸ್ವಾರ್ಥರಹಿತವಾದ ಯಾವ ಕಾನೂನು ಅವರಲ್ಲಿದೆ? ಅವರು ಸ್ವಯಂ ಶ್ರೇಷ್ಠ ಮಾನವರೆನಿಸಿಕೊಳ್ಳುತ್ತಾರೆ. ಮಾತ್ರವಲ್ಲ ವಾಸ್ತವದಲ್ಲಿ ತಮ್ಮನ್ನು ಮಾತ್ರ ಮನುಷ್ಯರೆಂದು ತಿಳಿದುಕೊಂಡಿದ್ದಾರೆ. ಅವರ ದೃಷ್ಟಿಯಲ್ಲಿ ದುರ್ಬಲ ಜನಾಂಗದವರು ಮನುಷ್ಯರೇ ಅಲ್ಲ. ಒಂದು ವೇಳೆ ಮನುಷ್ಯರಾಗಿದ್ದರೂ ಅತ್ಯಂತ ಕೆಳಮಟ್ಟದ ಮನುಷ್ಯರು. ಇವರು ಎಲ್ಲ ವಿಧಗಳಿಂದಲೂ ಇತರರಿಂದ ಉತ್ತಮರಾಗಿದ್ದು ತಮ್ಮ ಹಿತಾಸಕ್ತಿಗಳಿಗಾಗಿ

ಇತರರ ಹಿತಾಸಕ್ತಿಗಳನ್ನು ಬಲಿಕೊಡಲು ತಮಗೆ ಅಧಿಕಾರವಿದೆಯೆಂದು ತಿಳಿಯುತ್ತಾರೆ. ಜಗತ್ತಿನಲ್ಲಿ ಇವರ ಪ್ರಭಾವದಿಂದುಂಟಾದ ಕಾನೂನುಗಳೆಲ್ಲ ಈ ವರ್ಣ ತಾಳಿವೆ.

ಈ ಕೆಲವು ಉದಾಹರಣೆಗಳನ್ನು ಕೇವಲ ಸೂಚನೆಗಾಗಿ ಎತ್ತಿ ತೋರಿಸಿ ದ್ದೇನೆ. ಸವಿಸ್ತಾರವಾಗಿ ವಿವರಿಸಲು ಇಲ್ಲಿ ಅವಕಾಶವಿಲ್ಲ. ಜಗತ್ತಿನಲ್ಲಿ ಎಲ್ಲೆಲ್ಲಿ ಮಾನವ ಶಾಸನಗಳು ಪಾಲಿಸಲ್ಪಡುತ್ತಿವೆಯೋ ಅಲ್ಲೆಲ್ಲ ಅನ್ಯಾಯಗಳೇ ಆಗಿವೆಯೆಂಬುದನ್ನು ನಿಮಗೆ ತಿಳಿಸಲು ಬಯಸುತ್ತೇನೆ. ಕೆಲವರಿಗೆ ಅವರ ನ್ಯಾಯವಾದ ಹಕ್ಕಿಗಿಂತ ಹೆಚ್ಚು ಕೊಡಲಾಗಿದೆ, ಇನ್ನು ಕೆಲವರ ಹಕ್ಕುಗಳನ್ನು ಮಣ್ಣುಪಾಲು ಮಾಡಲಾಗಿದೆ; ಅಷ್ಟೇ ಅಲ್ಲ, ಅವರನ್ನು ಮಾನವ ಮಟ್ಟದಿಂದ ಕೆಳಗುರುಳಿಸಲಿಕ್ಕೂ ಹಿಂಜರಿಯಲಿಲ್ಲ. ಮಾನವನು ಯಾವುದಾದರೊಂದು ವಿಷಯದ ತೀರ್ಮಾನಕ್ಕೆ ಹೊರಟಾಗ ಅವನ ಮನ–ಮಸ್ತಿಷ್ಕಗಳ ಮೇಲೆ ತನ್ನ ಮತ್ತು ತನ್ನ ಕುಟುಂಬದ, ತನ್ನ ಸಂತತಿಯ ಅಥವಾ ತನ್ನ ಜನಾಂಗದ ಹಿತವು ಆಕ್ರಮಣ ನಡೆಸುವುದೇ ಇದಕ್ಕೆ ಕಾರಣ. ಇತರರ ಹಕ್ಕು ಮತ್ತು ಹಿತಗಳಿಗಾಗುವ ತನ್ನವರ ಮೇಲಿರುವಂತಹ ಸಹಾನುಭೂತಿ ಅವನಲ್ಲಿರುವು ದಿಲ್ಲ. ಹೀಗಿರುವಾಗ ಎಲ್ಲ ಮಾನವ ನಿರ್ಮಿತ ಶಾಸನಗಳನ್ನು ನೀರು ಪಾಲು ಮಾಡಿ, ನಾವೆಲ್ಲರೂ ದೇವಶಾಸನವನ್ನು ಸ್ವೀಕರಿಸಿಕೊಳ್ಳುವುದಲ್ಲದೆ ಇದಕ್ಕೆ ಇನ್ನಾವ ಪರಿಹಾರವಾದರೂ ಇದೆಯೇ? ದೇವನ ದೃಷ್ಟಿಯಲ್ಲಿ ಮನುಷ್ಯ ಮನುಷ್ಯರೊಳಗೆ ತಾರತಮ್ಯಗಳಿಲ್ಲ. ಒಂದು ವೇಳೆ ಇದ್ದರೂ ಅದು ಚಾರಿತ್ರ್ಯ, ಕರ್ಮ ಮತ್ತು ಅರ್ಹತೆ(ಮೆರಿಟ್)ಗಳ ತಳಹದಿಯಲ್ಲಿ ಮಾತ್ರ, ವಂಶ, ವರ್ಗ ಅಥವಾ ಜನಾಂಗದ ಆಧಾರದ ಮೇಲಲ್ಲ.

## ಶಾಂತಿ ಸ್ಥಾಪನೆ ಹೇಗೆ?

ಈ ನಿಟ್ಟಿನಲ್ಲಿ ಇನ್ನೊಂದು ಅಂಶವನ್ನೂ ಕಡೆಗಣಿಸುವಂತಿಲ್ಲ. ಕರ್ತವ್ಯ ಪ್ರಜ್ಞೆಯೂ ಮನುಷ್ಯನನ್ನು ಅಂಕೆಯಲ್ಲಿರಿಸುತ್ತದೆ ಎಂಬುದನ್ನು ನೀವು ಬಲ್ಲಿರಿ. ತಾನು ಏನು ಮಾಡಿದರೂ ಯಾರೂ ಕೇಳುವವರಿಲ್ಲ, ತನಗೆ ಶಿಕ್ಷೆ

ಕೊಡುವಂತಹ ಶಕ್ತಿ ಯಾವುದೂ ತನ್ನ ಮೇಲಿಲ್ಲವೆಂದು ಯಾರಾದರೂ ಖಾತ್ರಿಯಾಗಿ ಭಾವಿಸಿಕೊಂಡರೆ ಅವನು ನಿರಂಕುಶನಾಗುವನು. ಇದು ವ್ಯಕ್ತಿಯ ಮಟ್ಟಿಗೆ ಸರಿಯಾಗಿರುವಂತೆಯೇ ಒಂದು ವಂಶ, ಒಂದು ವರ್ಗ, ಒಂದು ಜನಾಂಗ ಮತ್ತು ಸಮಸ್ತ ಮಾನವ ಕೋಟಿಯ ಮಟ್ಟಿಗೂ ಸರಿ. ತನ್ನನ್ನು ಪ್ರಶ್ನಿಸುವವರಿಲ್ಲವೆಂದು ಒಂದು ವಂಶವು ತಿಳಿದುಕೊಂಡಾಗ ಅದು ಅಂಕೆ ತಪ್ಪಿ ನಡೆಯುತ್ತದೆ.

ಒಂದು ವರ್ಗವು ಕರ್ತವ್ಯಪ್ರಜ್ಞೆ ಮತ್ತು ಉತ್ತರದಾಯಿತ್ವದ ಭಯದಿಂದ ಮುಕ್ತವಾದಾಗ ಇತರರ ಮೇಲೆ ಅತ್ಯಾಚಾರವೆಸಗುವುದಕ್ಕೆ ಹಿಂಜರಿಯುವುದಿಲ್ಲ. ಒಂದು ಜನಾಂಗ ಅಥವಾ ರಾಷ್ಟ್ರವು ತನ್ನನ್ನು ಬಲಿಷ್ಠವೆಂದು ಕಂಡುಕೊಂಡೊಡನೆ ಅದಕ್ಕೆ ತನ್ನ ಅತಿರೇಕಗಳ ದುಷ್ಪರಿಣಾಮಗಳ ಭಯವೇ ಇಲ್ಲವಾಗಿ ಅದು ವನ್ಯಮೃಗದಂತೆ ದುರ್ಬಲ ಕುರಿಗಳನ್ನು ಬೇಟೆಯಾಡಲು ಆರಂಭಿಸುತ್ತದೆ. ಜಗತ್ತಿನಲ್ಲಿ ತಲೆದೋರುತ್ತಿರುವ ಎಲ್ಲ ಅಶಾಂತಿಗಳಿಗೆ ಇದೇ ಮುಖ್ಯ ಕಾರಣ. ಮಾನವನು ತನಗಿಂತ ಮೇಲಾದ ಶಕ್ತಿಯನ್ನು ಒಪ್ಪಿಕೊಳ್ಳುವ ತನಕ ಹಾಗೂ ತನಗಿಂತ ಮೇಲಿರುವಾತನಿಗೆ ತನ್ನ ಕರ್ಮಗಳ ಲೆಕ್ಕಾಚಾರ ಕೊಡಲಿಕ್ಕಿದೆಯೆಂದೂ ಅವನು ತನ್ನನ್ನು ಕಠಿಣವಾಗಿ ಶಿಕ್ಷಿಸುವಷ್ಟು ಶಕ್ತಿಶಾಲಿ ಯಾಗಿರುವನೆಂದೂ ವಿಶ್ವಾಸವಿರಿಸಿ ಕೊಳ್ಳುವ ತನಕ ಅಕ್ರಮ ಅತ್ಯಾಚಾರಗಳ ದ್ವಾರ ಮುಚ್ಚಲ್ಪಟ್ಟು ಶಾಂತಿ ಸ್ಥಾಪನೆಯಾಗಲು ಸಾಧ್ಯವೇ ಇಲ್ಲ.

ಇಂತಹ ಮಹಾ ಶಕ್ತಿಯು ಜಗದೊಡೆಯನ ಹೊರತು ಬೇರೆ ಯಾರಾಗಿರಲು ಸಾಧ್ಯ? ಮಾನವರಲ್ಲಿ ಇಂತಹ ಶಕ್ತಿಯಿಲ್ಲವೆಂಬುದು ನಿಜ. ಏಕೆಂದರೆ ನೀವು ಯಾವುದೇ ಮಾನವ ಅಥವಾ ಮಾನವ ವಿಭಾಗಕ್ಕೆ ಈ ಸ್ಥಾನ ಕೊಟ್ಟರೆ ಅದು ಸ್ವಯಂ ಲಗಾಮಿಲ್ಲದ ಕುದುರೆಯಂತಾಗುವುದರಲ್ಲಿ ಅನುಮಾನವಿಲ್ಲ. ಅನೇಕ ಫಿರ್‌ಔನರೊಂದಿಗೆ ತಾನೂ ಒಬ್ಬ ಫಿರ್‌ಔನ್ (ನಿರಂಕುಶ ಪ್ರಭು) ಆಗಿ ಮೆರೆಯುವ ಸಂದೇಹವಿದೆ. ಅವನು ಸ್ವಾರ್ಥ ಮತ್ತು ಪಕ್ಷಪಾತ ನೀತಿಗಳಿಂದ ಕೆಲವರನ್ನು ಬೀಳಿಸಬಲ್ಲನು; ಇನ್ನು ಕೆಲವರನ್ನು ಮೇಲೆತ್ತ ಬಲ್ಲನೆಂಬ ಭಯವಿದೆ. ಯುರೋಪ್ ಈ ಸಮಸ್ಯೆಯನ್ನು

ಬಗೆಹರಿಸಲಿಕ್ಕಾಗಿ ಸಂಯುಕ್ತ ರಾಷ್ಟ್ರಸಂಘ ಮತ್ತು ವಿಶ್ವಸಂಸ್ಥೆಯನ್ನು ಸ್ಥಾಪಿಸಿತು. ಆದರೆ ಅದು ಬಹುಬೇಗನೇ ಬಿಳಿಯರ ಸಂಘವಾಗಿ ಮಾರ್ಪಟ್ಟು ಕೆಲವು ಬಲಶಾಲಿ ರಾಷ್ಟ್ರಗಳ ಕೈಗೊಂಬೆಯಾಗಿ ದುರ್ಬಲ ಜನಾಂಗಗಳ ಮೇಲೆ ಅನ್ಯಾಯ ಮಾಡತೊಡಗಿತು.

ಈ ಪ್ರಯೋಗದ ನಂತರ ಒಬ್ಬೊಬ್ಬರಿಂದ ಆರಂಭಿಸಿ ಜಗತ್ತಿನ ಜನಾಂಗಗಳನ್ನೂ ರಾಷ್ಟ್ರಗಳನ್ನೂ ತನ್ನ ಹಿಡಿತದಲ್ಲಿಟ್ಟುಕೊಂಡು ಅವರ ವಿಚಾರಣೆ ನಡೆಸಲು ಬೇಕಾದ ಶಕ್ತಿಯು ಮಾನವರೊಳಗಿಂದ ಸಿಗುವುದು ಅಸಾಧ್ಯವೆಂಬುದು ಖಾತ್ರಿಯಾಯಿತು. ಇಂತಹ ಶಕ್ತಿಯು ಮಾನವ ಪರಿಧಿಯಿಂದ ಹೊರಗೆ ಮತ್ತು ಅವನಿಂದ ಮೇಲೆಯೇ ಇರಬೇಕಷ್ಟೇ. ಅದು ಜಗದೊಡೆಯನ ಶಕ್ತಿಯೇ ಆಗಬೇಕು. ನಾವು ನಮ್ಮ ಹಿತಚಿಂತಕರೆಂದಾದರೆ, ದೇವನ ಮೇಲೆ ವಿಶ್ವಾಸವಿರಿಸಬೇಕಾದುದೂ ಆ ರಾಜಾಧಿರಾಜನು ತನ್ನ ಅಂತರಂಗ ಬಹಿರಂಗಗಳನ್ನು ಚೆನ್ನಾಗಿ ಅರಿಯುವವನಾದುದರಿಂದ ಅದೊಂದು ದಿನ ಅವನ ಮಹಾ ನ್ಯಾಯಾಲಯದ ಮುಂದೆ ನಮ್ಮ ಇಡೀ ಜೀವಮಾನದ ಲೆಕ್ಕಾಚಾರಗಳನ್ನು ಇಡಲಿಕ್ಕಿದೆ ಎಂಬ ವಿಶ್ವಾಸದೊಂದಿಗೆ ಐಹಿಕ ಜೀವನ ನಡೆಸುತ್ತಿರಬೇಕಾದುದೂ ಅನಿವಾರ್ಯವಾಗಿರುತ್ತದೆ. ನಾವು ಸಭ್ಯ ಹಾಗೂ ಶಾಂತಿಪ್ರಿಯ ಮಾನವರಾಗಲು ಇದೊಂದೇ ದಾರಿ.

## ಒಂದು ಸಂದೇಹ

ಈಗ ನನ್ನ ಈ ಉಪನ್ಯಾಸವನ್ನು ಕೊನೆಗೊಳಿಸುವುದಕ್ಕೆ ಮುಂಚೆ ನಿಮ್ಮ ಪೈಕಿ ಹೆಚ್ಚಿನವರ ಮನಸ್ಸಿನಲ್ಲಿ ಏಳುತ್ತಿರಬಹುದಾದ ಒಂದು ಸಂಶಯವನ್ನು ನಿವಾರಿಸಬೇಕಾದುದು ಅಗತ್ಯವೆಂದು ಭಾವಿಸುತ್ತೇನೆ. ದೇವನ ಸಾಮ್ರಾಜ್ಯವು ಇಷ್ಟೊಂದು ಅಗಾಧವಾಗಿರುವಾಗ ಪರಮಾಣುವಿನಿಂದ ಸೂರ್ಯ ಚಂದ್ರಾದಿಗಳ ವರೆಗಿನ ಪ್ರತಿಯೊಂದು ವಸ್ತುವೂ ಅವನ ಅಂಕೆಯಲ್ಲಿದ್ದು ಮಾನವನ ಸ್ಥಾನವು ಈ ಸಾಮ್ರಾಜ್ಯದಲ್ಲಿ ಕೇವಲ ಒಬ್ಬ ಪ್ರಜೆಯದ್ದಾಗಿರುವಾಗ ಈ ಮಹಾ ಸಾಮ್ರಾಜ್ಯಕ್ಕೆದುರಾಗಿ ರಾಜದ್ರೋಹ ಎಸಗಲಿಕ್ಕೂ ತನ್ನ ಸ್ವಂತ ಸರಕಾರವನ್ನು ಘೋಷಿಸಿ ದೇವ ಪ್ರಜೆಗಳ ಮೇಲೆ

ತನ್ನ ಅಧಿಕಾರ ಸ್ಥಾಪನೆ ಮಾಡಲಿಕ್ಕೂ ಮಾನವನಿಂದ ಹೇಗೆ ಸಾಧ್ಯವಾಯಿತು? ದೇವನು ಅವನನ್ನು ತಡೆಯುವುದಿಲ್ಲವೇಕೆ? ಅವನಿಗೆ ಶಿಕ್ಷೆ ಕೊಡು ವುದಿಲ್ಲವೇಕೆ? ಎಂದು ನೀವು ಯೋಚಿಸುತ್ತಿರಬಹುದು. ಈ ಪ್ರಶ್ನೆಗಳ ಉತ್ತರವನ್ನು ಇಲ್ಲಿ ಸಂಕ್ಷಿಪ್ತವಾಗಿ ಕೊಡುವೆನು.

ವಾಸ್ತವದಲ್ಲಿ ದೇವಸಾಮ್ರಾಜ್ಯದಲ್ಲಿ ಮಾನವನ ನೈಜ ನೆಲೆಯು ಸಾಮಾನ್ಯವಾಗಿ ಒಬ್ಬ ರಾಜನು ತನ್ನ ಸೀಮೆಯೊಳಗಿನ ಜಿಲ್ಲೆಯೊಂದಕ್ಕೆ ನೇಮಿಸಿದ ಜಿಲ್ಲಾಧಿಕಾರಿಯಂತಿದೆ. ಸಾಮ್ರಾಜ್ಯವೂ ಪ್ರಜೆಗಳೂ ರಾಜನದ್ದೇ. ರೈಲ್ವೇ, ದೂರವಾಣಿ, ತಂತಿ, ಸೈನ್ಯ ಇನ್ನಿತರ ಎಲ್ಲಾ ತರದ ಬಲಗಳು ರಾಜನ ಅಧೀನದಲ್ಲೇ ಇರುತ್ತವೆ. ರಾಜನ ಪ್ರಭುತ್ವವು ಆ ಜಿಲ್ಲೆಯನ್ನು ಸಂಪೂರ್ಣ ಆವರಿಸಿದ್ದು ಅವನ ಶಕ್ತಿಯ ಮುಂದೆ ಜಿಲ್ಲಾಧಿಕಾರಿಯು ತೀರಾ ದುರ್ಬಲನಾಗಿರುತ್ತಾನೆ. ರಾಜನು ಇಚ್ಛಿಸಿದರೆ ತನ್ನ ಆಜ್ಞೆಗಳನ್ನು ಚಾಚೂ ತಪ್ಪದೆ ಪಾಲಿಸಬೇಕೆಂದು ಜಿಲ್ಲಾಧಿಕಾರಿಯನ್ನು ನಿರ್ಬಂಧ ಗೊಳಿಸಬಲ್ಲನು. ಆದರೆ ರಾಜನು ಜಿಲ್ಲಾಧಿಕಾರಿಯ ಬುದ್ಧಿಶಕ್ತಿ, ಚಾತುರ್ಯ, ಯೋಗ್ಯತೆ, ಕಾರ್ಯಕುಶಲತೆಗಳ ಪರೀಕ್ಷೆ ನಡೆಸಲು ಬಯಸುತ್ತಾನೆ. ಅದಕ್ಕಾಗಿ ಆ ಜಿಲ್ಲಾಧಿಕಾರಿಯು ತನ್ನ ಮೇಲೊಬ್ಬ ಸರ್ವಾಧಿಕಾರಿ ಇದ್ದಾನೆಂಬುದನ್ನೇ ಮರೆತು ಬಿಡಬಹುದಾದ ರೀತಿಯಲ್ಲಿ ರಾಜನು ಜಿಲ್ಲಾಧಿಕಾರಿಯ ಮೇಲಿನ ಹಿಡಿತವನ್ನು ಸಡಿಲಿಸಿಬಿಡುತ್ತಾನೆ.

ಅಧಿಕಾರಿಯು ನಿಜವಾಗಿ ಬುದ್ಧಿವಂತನೂ ಪ್ರಾಮಾಣಿಕನೂ ಕರ್ತವ್ಯನಿಷ್ಠನೂ ವಿಧೇಯನೂ ಆಗಿದ್ದರೆ ಇಷ್ಟು ಸಡಿಲು ನೀತಿಯಿದ್ದಾಗ್ಯೂ ತನ್ನನ್ನು ಪ್ರಜೆ ಹಾಗೂ ನೌಕರನೆಂದೇ ಭಾವಿಸಿಕೊಂಡು ರಾಜನ ಶಾಸನಗಳಿಗೆ ಅನುಸಾರವಾಗಿಯೇ ಆಡಳಿತ ನಡೆಸುತ್ತಾನೆ. ರಾಜನು ಅವನಿಗೆ ನೀಡಿರುವ ಅಧಿಕಾರಗಳನ್ನು ಅವನ ಇಚ್ಛೆಗಳಿಗೆ ಅನುಸಾರವಾಗಿಯೇ ಉಪಯೋಗಿಸುತ್ತಾನೆ. ಈ ಪ್ರಾಮಾಣಿಕ ವರ್ತನೆಯಿಂದ ಅವನ ಯೋಗ್ಯತೆಯು ಪ್ರಕಟಗೊಳ್ಳುತ್ತದೆ. ರಾಜನು ಅವನನ್ನು ಭಡ್ತಿಗೆ ಅರ್ಹನೆಂದು ಮನಗಂಡು ಭಡ್ತಿಯ ಮೇಲೆ ಭಡ್ತಿ ಕೊಡುತ್ತಾ ಹೋಗುತ್ತಾನೆ.

ಆದರೆ, ಜಿಲ್ಲಾಧಿಕಾರಿ ಮೂರ್ಖನೂ ಅಪ್ರಾಮಾಣಿಕನೂ ಕಿಡಿಗೇಡಿಯೂ ಆಗಿದ್ದು ಆ ಜಿಲ್ಲೆಯ ಪ್ರಜೆಗಳು ಅಜ್ಞಾನಿಗಳೂ ತಿಳಿಗೇಡಿಗಳೂ ಆಗಿದ್ದರೆ, ತನ್ನ ಮೇಲಿನ ಹಿಡಿತ ಸಡಿಲಾಗಿರುವುದನ್ನು ಕಂಡು ರಾಜದ್ರೋಹ ಮಾಡಲೆತ್ನಿಸುತ್ತಾನೆ: ಅವನ ತಲೆಯೊಳಗೆ ಸ್ವಾಯತ್ತತೆಯ ಅಹಂಕಾರ ತುಂಬಿರುತ್ತದೆ. ಅವನು ತನ್ನನ್ನೇ ಜಿಲ್ಲೆಯ ಮಾಲಿಕನೆಂದೆನಿಸಿ ನಿರಂಕುಶ ಪ್ರಭುತ್ವ ನಡೆಸಲಾರಂಭಿಸುತ್ತಾನೆ. ವೇತನವನ್ನು ಜಿಲ್ಲಾಧಿಕಾರಿ ಕೊಡುತ್ತಿರುವುದನ್ನೂ ಪೊಲೀಸು, ನ್ಯಾಯಾಲಯ, ಸೆರೆಮನೆ, ಬೇಡಿಗಳು, ನೇಣುಗಂಬಗಳು ಅವನ ಕೈಯಲ್ಲಿರುವುದನ್ನೂ ತಮ್ಮ ಅದೃಷ್ಟವನ್ನು ರೂಪಿಸುವ ಅಥವಾ ಕೆಡಿಸುವ ಅಧಿಕಾರ ಆತನು ಹೊಂದಿರುವುದನ್ನೂ ಕಂಡು ಅಜ್ಞಾನಿ ಪ್ರಜೆಗಳು ಅವನ ನಿರಂಕುಶ ಪ್ರಭುತ್ವವನ್ನು ಒಪ್ಪಿಕೊಳ್ಳುತ್ತಾರೆ.

ರಾಜನು ಈ ಬುದ್ಧಿಗೆಟ್ಟ ಪ್ರಜೆಗಳನ್ನೂ ರಾಜದ್ರೋಹಿ ಅಧಿಕಾರಿಯ ವರ್ತನೆಗಳನ್ನೂ ನೋಡುತ್ತಲೇ ಇರುತ್ತಾನೆ. ಅವನು ಇಚ್ಛಿಸಿದರೆ ಕೂಡಲೇ ಅವನನ್ನು ಸೆರೆಹಿಡಿದು ಬುದ್ಧಿ ನೆಟ್ಟಗಾಗುವ ರೀತಿಯ ಶಿಕ್ಷೆ ವಿಧಿಸಬಲ್ಲನು. ಆದರೆ ಅವನು ಇಕ್ಕಡೆಯವರನ್ನೂ ಚೆನ್ನಾಗಿ ಪರೀಕ್ಷಿಸಲಿಚ್ಛಿಸುವುದರಿಂದ ಅವರೊಳಗೆ ಅಡಗಿರುವ ದುಷ್ಟಶಕ್ತಿಗಳೆಲ್ಲ ಸಂಪೂರ್ಣವಾಗಿ ಹೊರಗೆ ಬರುವಂತೆ ಮಾಡುವುದಕ್ಕಾಗಿ ತಾಳ್ಮೆ ಮತ್ತು ಸಹನೆಯೊಂದಿಗೆ ಸಡಿಲು ಬಿಡುತ್ತಾ ಹೋಗುತ್ತಾನೆ.

ರಾಜನು ಎಷ್ಟು ಪ್ರಬಲನೆಂದರೆ ಆ ಅಧಿಕಾರಿಯು ಪ್ರಾಬಲ್ಯ ಹೊಂದಿ ತನ್ನ ಸಿಂಹಾಸನವನ್ನೇ ಕಸಿದುಕೊಳ್ಳಬಹುದೆಂಬ ಭೀತಿ ಆತನಿಗೆ ಇರುವುದೇ ಇಲ್ಲ. ಈ ರಾಜದ್ರೋಹಿ ಹಾಗೂ ಕೃತಘ್ನ ಜನತೆ ತನ್ನ ಹಿಡಿತದಿಂದ ತಪ್ಪಿ ಬೇರೆಲ್ಲಾದರೂ ಓಡಿ ಹೋಗಬಹುದೆಂಬ ಆಶಂಕೆಯೂ ರಾಜನಿಗಿರುವುದಿಲ್ಲ. ಆದುದರಿಂದ ಅವನಿಗೆ ಅವಸರದ ತೀರ್ಮಾನ ಕೈಗೊಳ್ಳುವ ಅಗತ್ಯವೇ ಇರುವುದಿಲ್ಲ. ಅವನು ವರ್ಷಗಟ್ಟಲೆ ಮಾತ್ರವಲ್ಲ, ಶತಮಾನಗಳ ತನಕ ಅವಕಾಶ ಕೊಡುತ್ತಲೇ ಇರುತ್ತಾನೆ. ಇವರು ತಮ್ಮ ಸಂಪೂರ್ಣ ದುರ್ಬುದ್ಧಿಗಳನ್ನು ಪ್ರಕಟಗೊಳಿಸಿ ಮತ್ತೇನೂ ಉಳಿಯದಿದ್ದಾಗ ಅವರ ಮೇಲೆ ತನ್ನ

ಯಾತನೆಯನ್ನು ಕಳುಹಿಸುತ್ತಾನೆ. ಅದು ಆ ಶಿಕ್ಷೆಯಿಂದ ಪಾರಾಗಲು ಯಾವ ಯುಕ್ತಿಯೂ ಫಲಕಾರಿಯಾಗದಂತಹ ಕಾಲವಾಗಿರುತ್ತದೆ.

ನಾನೂ ನೀವೂ ದೇವನಿಂದ ನೇಮಿಸಲ್ಪಟ್ಟ ಈ ಅಧಿಕಾರಿಗಳೂ ಎಲ್ಲರೂ ಈ ಪರೀಕ್ಷೆಗೊಳಗಾಗಿದ್ದೇವೆ. ನಮ್ಮ ಬುದ್ಧಿಶಕ್ತಿ, ಅರ್ಹತೆ, ಕರ್ತವ್ಯನಿಷ್ಠೆ, ಪ್ರಾಮಾಣಿಕತೆಗಳ ಕಠಿಣತರವಾದ ಪರೀಕ್ಷೆ ನಡೆಯುತ್ತಲೇ ಇದೆ. ನಮ್ಮ ಪೈಕಿ ಪ್ರತಿಯೊಬ್ಬನೂ ತಾನು ಸಾಕ್ಷಾತ್ ಪ್ರಭುವಿನಿಂದ ನೇಮಿಸಲ್ಪಟ್ಟ ಪ್ರಾಮಾಣಿಕ ಅಧಿಕಾರಿ ಹಾಗೂ ಪ್ರಜೆಯಾಗಬೇಕೋ ಅಥವಾ ಕೃತಘ್ನರಾಗಬೇಕೋ ಎಂದು ನಿರ್ಧರಿಸಬೇಕಾಗಿದೆ. ನಾನಂತೂ ಪ್ರಾಮಾಣಿಕನಾಗುವ ನಿರ್ಧಾರ ಕೈಗೊಂಡಿದ್ದೇನೆ. ನಾನು ಪ್ರತಿಯೊಬ್ಬ ದೇವದ್ರೋಹಿಯ ವೈರಿಯೂ ಆಗಿರುತ್ತೇನೆ. ನೀವು ನಿಮ್ಮ ನಿರ್ಧಾರ ಕೈಗೊಳ್ಳುವುದರಲ್ಲಿ ಸ್ವತಂತ್ರರಾಗಿರುತ್ತೀರಿ. ಈ ಮಾರ್ಗವನ್ನೂ ಅನುಸರಿಸಬಹುದು ಅಥವಾ ಆ ಮಾರ್ಗವನ್ನೂ ಅನುಸರಿಸಬಹುದು. ಒಂದು ಕಡೆ ದೇವದ್ರೋಹಿಗಳಾಗಿರುವ ನೌಕರರು ಒದಗಿಸುವಂತಹ ನಷ್ಟಗಳೂ ಲಾಭಗಳೂ ಇವೆ. ಇನ್ನೊಂದೆಡೆ ದೇವನಿಂದ ಒದಗುವ ಲಾಭ–ನಷ್ಟಗಳಿವೆ. ಇವುಗಳ ಪೈಕಿ ನಿಮಗೆ ಇಷ್ಟವಿದ್ದುದನ್ನು ಆಯ್ದುಕೊಳ್ಳಬಹುದು.

❖ ❖ ❖ ❖